(ಗೊಂದಲ)

ಅಧ್ಯಕ್ಷರು,—ನಾನು ಪ್ರತಿಸಾರಿಯೂ ಎಷ್ಟು ಅಡ್ಜರ್ನ್‌ಮೆಂಟ್ ಮೋಷನ್ ಬರುತ್ತವೋ ಅಷ್ಟನ್ನೂ ಸದನಕ್ಕೆ ತಿಳಿಸಿದ್ದೇನೆ ಈಗ ಮುಂದೆ ನಾನು ಏನು ಮಾಡಬೇಕೆ ದಿದ್ದೇನೆ ಎಂಬುದನ್ನು ತಮಗೆ ಹೇಳುತ್ತೇನೆ. ಅವರು ನೋಟೀಸ್‌ನ್ನು ಕೊಟ್ಟರುವುದನ್ನು ಮಾತ್ರ ನಾನು ಹೇಳುತ್ತೇನೆ. It is my duty to bring to the notice of this House whatever I receive.

SRI M. MALLIKARJUN KHARGE. Sir, after the question hour, you can bring that to the notice of the House.

(ಗೊಂದಲ)

ಅಧ್ಯಕ್ಷರು.—ನನಗೂ ಮಾತನಾಡಲು ನೀವು ಅವಕಾಶವನ್ನು ಕೊಡುವುದಿಲ್ಲ ಎಂದರೆ ಅದು ಸರಿಯಾಗುವುದಿಲ್ಲ. ನನಗೆ ಏನು ನೋಟೀಸ್ ಬಂದಿದೆ, ನಾನು ಏನು ಸ್ವೀಕರಿಸಿದ್ದೇನೆ, ಅದನ್ನು ಸದನಕ್ಕೆ ತಿಳಿಸುವುದು ನನ್ನ ಕರ್ತವ್ಯ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಿನ್ನೆಯ ದಿವಸ ಬಿಲ್ಸ್ ಎಲ್ಲಾ ಆದಮೇಲೆ. ಕ್ವಶ್ಚನ್ ಹವರ್ ಆದಮೇಲೆ.....

ನಿಲುವಳಿ ಸೂಚನೆ

ಠಕ್ಕರ್ ಆಯೋಗದ ವರದಿ

ಅಧ್ಯಕ್ಷರು.—ಪ್ರತಿ ದಿನ ಕ್ವೆಶ್ಚನ್ ಹವರ ಇರುತ್ತಿತ್ತು, ದುರ್ದೈವ ಇವತ್ತು ಕ್ವೆಶ್ಚನ್‌ಹವರ್ ಇಲ್ಲ. ನಾನು ಈಗ ಸದನದ ಗಮನಕ್ಕೆ ತರುತ್ತೇನೆ, ಮುಂದೆ ಇದನ್ನು ಅಲೋ ಮಾಡುವುದು, ಡಿಸ್ ಅಲೋ ಮಾಡುವುದು ನನಗೆ ಸೇರಿದ್ದುದು. ನಾನು ಇನ್ನೂ ಇದರ ಬಗ್ಗೆ ರೂಲಿಂಗ್ ಕೊಟ್ಟಿಲ್ಲ. ಆದರೆ ಇದನ್ನು ನಾನು ತಪ್ಪು ನಜರಿಗೆ ತರುತ್ತಿದ್ದೇನೆ. ಆದರೂ ಸಹ ಇದನ್ನು ಒತ್ತಾಯ ಮಾಡುತ್ತಿಲ್ಲ. ಮಾನ್ಯ ರಘುಪತಿ ಸುವರು ಎದ್ದುನಿಂತು ಇದಕ್ಕೆ ಅವಕಾಶವನ್ನು ಕೊಡಿ ಎಂದು ಕೇಳಿದರು. ಅದು ಏನು ಎಂಬುದು ನನಗೂ ಗೊತ್ತಿಲ್ಲ. ನಾನು ಅದನ್ನು ನೋಡಿಲ್ಲ. ನಾನು ನನ್ನ ಛೇಂಬರ್ ನಿಂದ ಬರುವಾಗ ಅವರು ಇದನ್ನು ತಂದು ಕೊಟ್ಟಿದ್ದಾರೆ, ಇದು ಏನು ಏಂಬುದನ್ನು ಈಗ ನೋಡಿ ಹೇಳುತ್ತೇನೆ.....

(ಗೊಂದಲ)

SRI M. MALLIKARJUA KHARGE.—They can only raise it after the Question Hour.

(ಗೊಂದಲ)

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಇದು ದೇಶದ ಭವ್ಯತೆಗೆ ಸಂಬಂದಪಟ್ಟ ವಿಚಾರವಾಗಿದೆ.

ಅಧ್ಯಕ್ಷರು.—ನಾನು ಇನ್ನೂ ಅವರಿಗೆ ಅವಕಾಶವನ್ನು ಕೊಟ್ಟಿಲ್ಲ. ಅವರು ಏನು ನೋಟಿಸ್ ಕೊಟ್ಟಿದ್ದಾರೆಂಬುದನ್ನು ಬಾಯಿಯಲ್ಲಿ ಹೇಳುವುದು ಬೇಡ, ಸದನಕ್ಕೇ ಓದಿ ಹೇಳುತ್ತೇನೆ.

SRI M. MALLIKARJUNA KHARGE.—You can tell it after the question hour.

ಅಧ್ಯಕ್ಷರು.—ಆದೇನೂ ಸಂಬಂಧವಿಲ್ಲ, I can tell it at any time.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಏನಾದರೂ ಕಾರ್ಯಕ್ರಮಗಳನ್ನು ಸದನದಲ್ಲಿ ರೂಪಿಸಿಕೊಳ್ಳಬೇಕಾದರೆ ತಾವೂ ಕೂಡ ಕೆಲವು ನೀತಿ ನಿಯಮಗಳನ್ನು ಅನುಸರಿಸಬೇಕಾಗಿದೆ, ಕ್ವೆಶ್ಚನ್ ಹವರ್ ಆದಮೇಲೆ ಇದರ ಬಗ್ಗೆ ಪ್ರಸ್ತಾಪ ಮಾಡಬೇಕಾಗುತ್ತದೆ. ಇದನ್ನು ಏನಿದ್ದರೂ ಕ್ವೆಶ್ಚನ್ ಹವರ್ ಆದಮೇಲೆ ಪ್ರಸ್ತಾಪ ಮಾಡಬೇಕೇ ಹೊರತು ಆದಕ್ಕೆ ಮುಂಚಿತವಾಗಿ ಮಾಡ ಬಾರದು. ಈ ಸದನದ ನಿಯಮಾವಳಿಯನ್ನು ಮಿಂಚಿ ಯಾರೂ ಕೂಡ ನಡೆದುಕೊಳ್ಳುವುದಕ್ಕಾಗುವು ದಿಲ್ಲ. ತಾವು ಈ ನಿಯಮಾವಳಿಯನ್ನು ಅನುಸರಿಸಿ ಏನು ಮಾಡಬೇಕೋ ಅದನ್ನು ಮಾಡಬೇಕಾಗು ತ್ತದೆ. ಕ್ವೆಶ್ಚನ್ ಹವರ್‌ಗೆ ಮುಂಚಿತವಾಗಿಯೇ ಚರ್ಚೆ ಮಾಡುವುದಕ್ಕೆ ತಾವೇ ಏತಕ್ಕೆ ಅವಕಾಶವನ್ನು ಕೊಡುತ್ತೀರಿ? ಆ ಪದ್ಧತಿ ಎಲ್ಲಿದೆ ?

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಯಡಿಯೂರಪ್ಪ ನವರೂ, ಮಾನ್ಯ ಕೃಷ್ಣನ್‌ನವರೂ ಮತ್ತು ನಾನೂ ಸೇರಿ ಈ ಠಕ್ಕರ್ ಕಮಿಷನ್ ರಿಪೋರ್ಟ್‌ನ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ.

(ಗೊಂದಲ)

ಅಧ್ಯಕ್ಷರು.—ನಾನು ಇನ್ನೂ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿಲ್ಲ,

SRI M. MALLIKARJUNA KHARGE.—Under what rule they are raising ?

(ಗೊಂದಲ)

ಶ್ರೀ ಜಿ.ಜಿ.ಆರ್. ಸಿಂಧ್ಯ.—ಅವರ ಹಕ್ಕನ್ನು ಯಾರೂ ಕೂಡ ಮೊಟಕು ಮಾಡುವುದಕ್ಕಾಗುವು ದಿಲ್ಲ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ನಮ್ಮ ನಿಲುವಳಿ ಸೂಚನೆಯನ್ನು ದಯವಿಟ್ಟು ಮೊದಲು ತೆಗೆದುಕೊಳ್ಳಬೇಕೆಂದು ನಮ್ಮ ಕಳಕಳಿಯ ಮನವಿ, ಅಷ್ಟೇ ಸ್ವಾಮಿ ! The security of the nation is involved in this.

ಅಧ್ಯಕ್ಷರು.—ಸ್ವಲ್ಪ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ ಎಂದು ನಾನು ಹೇಳುತ್ತೇನೆ, ಈಗ ತಾವು ಒಂದು ನೋಟೀಸ್ ಕೊಟ್ಟಿದ್ದೀರಿ.....

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ನಾನು ಹೇಳುವುದು ಏನೆಂದರೆ, ತಾವೇ ತೀರ್ಮಾನ ಮಾಡಿ. ಲ್ಯಾಂಡ್ ಗ್ರಾಂಟ್ ವಿಷಯವನ್ನು ಒಳಗೆ ಪ್ರಕಾರ ಚರ್ಚೆ ಮಾಡಬೇಕೆಂದು ಹೇಳಿ ಅಜೆಂಡಾದಲ್ಲಿ ಹಾಕಿದೆ. ಅದು ತಪ್ಪಾಗಿ ಗೊತ್ತಿದೆ. ಈಗ ಅವರ ಬಗ್ಗೆ ಚರ್ಚೆ ನಡೆಯಬೇಕು: ಅದರ ಬಗ್ಗೆ ಚರ್ಚೆ ನಡೆಯಕೂಡದೆಂದು ನಾನು ಹೇಳುವುದಿಲ್ಲ. ಆರಂಭ ಹೇಳುವುದು ಸರಿಯಲ್ಲ ಎರಡನೆಯ ದಾಗಿ ನಾವು ಮಾನ್ಯ ವೆಂಕಟರಾಮಯ್ಯನವರು ಮತ್ತು ಮಾನ್ಯ ಯಡಿಯೂರಪ್ಪನವರು ಸೇರಿಕೊಂಡು ಬೆಳಿಗ್ಗೆ ಒಂದು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದೇವೆ. ಅದು ಯಾವುದೆಂದರೆ ಠಕ್ಕರ್ ಕಮಿಷನ್ ರಿಪೋರ್ಟ್ ಬಗ್ಗೆ, ಅದರ ಮುಖ್ಯವಾದ ಉದ್ದೇಶವೇನೆಂದು ಹೇಳಬೇಕಾಗಿದೆ. ಇದರ ಬಗ್ಗೆ ಇಲ್ಲಿಯೇ ಇಲ್ಲ ದೇಶದಾದ್ಯಂತ ಎಲ್ಲ ವಿಧಾನ ಸಭೆಗಳಲ್ಲೂ ಚರ್ಚೆ ಮಾಡುತ್ತಿದ್ದಾರೆ. ಇದರ ಬಗ್ಗೆ ರೇಡಿಯೋ ಟೆಲಿವಿಷನ್ ಮತ್ತು ಪತ್ರಿಕೆಗಳಲ್ಲೆಲ್ಲ ಬಂದಿದೆ. ಇದು ಬಹಳ ಮುಖ್ಯವಾದ ವಿಷಯ ! ಇದು ಪಾರ್ಟಿ ಪ್ರಶ್ನೆಯಲ್ಲ. ರಿಪೋರ್ಟ್ ಬಂದಮೇಲೆ...

ಶ್ರೀ ಎಂ. ವೀರಪ್ಪ ಮೊಯಿಲಿ.—ಯಾರಾಯಾರೋ ಹೇಳಿದ್ದನ್ನೆಲ್ಲ ನೀವು ಏತಕ್ಕೆ ತಲೆಗೆ ಹಾಕಿ ಕೊಳ್ಳುತ್ತೀರಿ.

ಶ್ರೀ ಎಂ.ಎಸ್. ಕೃಷ್ಣನ್.—ಯಾರೋ ಹೇಳಿದ್ದನ್ನು ತಲೆಗೆ ಹಾಕಿಕೊಳ್ಳುತ್ತಿಲ್ಲ ನಮಗೂ ಬುದ್ಧಿ ಇದೆ. ನಮ್ಮದು ಬಾಡಿಗೆ ಬುದ್ಧಿಯಲ್ಲ !

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಸ್ವಂತಬುದ್ಧಿಯಿದ್ದರೆ ಕೇಳಿ.

(ಗೊಂದಲ)

ಅಧ್ಯಕ್ಷರು.—ನಾನು ಯಾರನ್ನು ಮಾತನಾಡಲು ಅಲೋಮಾಡಿಲ್ಲ. ಈಗ ನನಗೆ ಯಾರು ಮಾತನಾಡಲಿಕ್ಕೆ ಬಿಡುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾನು ತಮ್ಮನ್ನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ, ಏನೆಂದರೆ ಈ ಬಗ್ಗೆ ತಾವು ಯಾವ ರೂಲ್ ಪ್ರಕಾರ ಮಾತನಾಡಲು ಅಲೋ ಮಾಡಿದ್ದೀರೆಂಬುದನ್ನು ಹೇಳಬೇಕು.

ಅಧ್ಯಕ್ಷರು.—ರೂಲ್ ಇಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಇದು ರಾಷ್ಟ್ರೀಯ ಭದ್ರತಾ ಪ್ರಶ್ನೆಯಾಗಿದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಯಾವ ರೂಲ್...

(ಗೊಂದಲ)

ಅಧ್ಯಕ್ಷರು.—ನಾನು ಯಾರಿಗೂ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಾವು ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ.

(ಗೊಂದಲ)

ಶ್ರೀ ಎಂ ವೀರಪ್ಪಮೊಯಿಲಿ.—ಇಲ್ಲಿ ರೂಲ್ ಪ್ರಕಾರ ಕಾರ್ಯಕಲಾಪ ನಡೆಯುತ್ತಿಲ್ಲ. ರೂಲ್ ಇಲ್ಲದ ಪಕ್ಷದಲ್ಲಿ ನಾನು ಏನೂ ಹೇಳುವುದಕ್ಕೆ ಹೋಗುವುದಿಲ್ಲ. ನೀವೇ ಏನು ಬೇಕಾದರೂ ಮಾತನಾಡಿ ಎಂದು ಹೇಳಲಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಶ್ರೀ ರಘುಪತಿಯವರು ನೋಟೀಸ್ ಕೊಟ್ಟಿದ್ದಾರೆ. ಕೇಳಿ...

ಶ್ರೀ ಎಂ. ವೀರಪ್ಪಮೊಯಿಲಿ.—ಅವರು ನೋಟೀಸ್ ಕೊಟ್ಟಿದ್ದಾರೆಯೇ ?

SRI M MALLIKARJUNA KHARGE.—Let them raise it after the Question Hour. Under which rule they are raising this ? How can they raise it ?

ಅಧ್ಯಕ್ಷರು.—ಅವರು ಈಗಲೇ ತೆಗೆದುಕೊಳ್ಳಬೇಕೆಂದು ಹೇಳುತ್ತಿಲ್ಲ ನೀವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಈಗ ಯಾರು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ,

* * *

ಅಧ್ಯಕ್ಷರು.—ಏನೂ ರೆಕಾರ್ಡಿಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ರೆಕಾರ್ಡಿಗೆ ಏನೂ ಹೋಗುವುದಿಲ್ಲ.

(ಗೊಂದಲ)

*** ಅಧ್ಯಕ್ಷರ ಆಜ್ಞೆ ಮೇರೆಗೆ ದಾಖಲಿಸಿಕೊಳ್ಳಲಿಲ್ಲ.

ಅಧ್ಯಕ್ಷರು.—ಏನೂ ರೆಕಾರ್ಡಿಗೆ ಹೋಗುವುದಿಲ್ಲ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು.

* *

(ಗೊಂದಲ)

ಅಧ್ಯಕ್ಷರು.—ರೆಕಾರ್ಡಿಗೆ ಏನೂ ಹೋಗುವುದಿಲ್ಲ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ, ನಾನು ಈಗ ರೂಲಿಂಗ್ ಕೊಡುತ್ತೇನೆ.

(ಗೊಂದಲ)

* *

ಅಧ್ಯಕ್ಷರು.—ರೆಕಾರ್ಡಿಗೆ ಏನೂ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ರೆಕಾರ್ಡಿಗೆ ಏನೂ ಹೋಗುವುದಿಲ್ಲ, ತಾವು ಎಲ್ಲರೂ ಕುಳಿತುಕೊಳ್ಳಿ. ನನಗೆ ಎರಡು ನೋಟಿಸ್‌ಗಳು ಬಂದಿವೆ. ಇವುಗಳನ್ನು ಪ್ರಶ್ನೋತ್ತರದ ನಂತರ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ ಆದ್ದರಿಂದ ಈ ಎರಡನ್ನು ಕ್ವೆಶ್ಚನ್ ಅವರ್ ಆದಮೇಲೆ ತೆಗೆದು ಕೊಳ್ಳೋಣ. ಠಕ್ಕರ್ ಕಮಿಷನ್ ಬಗ್ಗೆ ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟದ್ದು ಮತ್ತು ತಮ್ಮದು ಸೇರಿ ಈ ಎರಡನ್ನೂ ಕ್ವೆಶ್ಚನ್ ಅವರ್ ಮುಗಿದ ಮೇಲೆ ತೆಗೆದುಕೊಳ್ಳೋಣ. ಈಗ ಅಜೆಂಡ ಪ್ರಕಾರ ಹೋಗೋಣ

(ಗೊಂದಲ)

ಅಧ್ಯಕ್ಷರು.—ಕ್ವೆಶ್ಚನ್ ಅವರ್ ಆದಮೇಲೆ ತೆಗೆದುಕೊಳ್ಳುತ್ತೇನೆ. ಈಗ ಬಿಸಿನೆಸ್ ಪ್ರಕಾರ ಹೋಗೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವತ್ತು ನಾವು ರೂಲ್ ೬೮ರ ಪ್ರಕಾರ ಚರ್ಚೆ ಮಾಡುತ್ತೇವೆಂದು ತಿಳಿದು ಇದರ ಮಧ್ಯೆ ಠಕ್ಕರ್ ಕಮಿಷನ್ ಬಗ್ಗೆ ಚರ್ಚಿಸಬೇಕೆಂದು ಕುತಂತ್ರ ಮಾಡಿರುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು.—ಕ್ವೆಶ್ಚನ್ ಆಫರ್ ಆದಮೇಲೆ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ, ಎರಡೂ ಇಶ್ಯೂಗಳನ್ನು ತೆಗೆದುಕೊಳ್ಳುತ್ತೇನೆಂದು ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. ಕ್ವೆಶ್ಚನ್ ಅವರ್ ಮುಗಿದ ಮೇಲೆ ತೆಗೆದುಕೊಳ್ಳೋಣವೆಂದು ಹೇಳಿದ್ದೇನೆ. ಈಗ ಅಜೆಂಡಾ ಪ್ರಕಾರ ಹೋಗೋಣ.

ಶ್ರೀ ಎಂ. ರಘುಪತಿ.— ಅಧ್ಯಕ್ಷರೇ ...

ಅಧ್ಯಕ್ಷರು.—ರಘುಪತಿಯವರೇ, ತಾವು ಕುಳಿತುಕೊಳ್ಳಿ. ಮುಖ್ಯ ಮಂತ್ರಿಗಳು ಏನು ಹೇಳುತ್ತಾರೋ ಕೇಳಲಿ.

ಶ್ರೀ ಎಂ. ರಘುಪತಿ. ಅಧ್ಯಕ್ಷರೇ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಒಂದು ಆಪಾದನೆ ಮಾಡಿದರು. ಸೊಸೈಟಿಗಳ ಬಗ್ಗೆ ಚರ್ಚೆ ಆಗುವುದನ್ನು ಸ್ಟಾಪ್ ಮಾಡುವುದಕ್ಕೆ ಕುತಂತ್ರ ಮಾಡಿದರು ಎಂದು ನಮ್ಮ ಬಗ್ಗೆ ಹೇಳಿದರು. ಆ ಅಭಿಪ್ರಾಯ ನಮಗಿಲ್ಲ. ಸೊಸೈಟಿ ಬಗ್ಗೆ ಎಷ್ಟು ಬೇಕಾದರೂ ಚರ್ಚೆ ನಡೆಯಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಧ್ಯಕ್ಷರೆ, ನಡೆಯುತಕ್ಕ ಚರ್ಚೆ ನಿಲ್ಲಿಸಬೇಕು ಎಂಬ ಕುತಂತ್ರ ಇದೆ ಎನ್ನುವ ಶಬ್ದವನ್ನು ಉಪಯೋಗ ಮಾಡಿದರು. ಸರ್ಕಾರಕ್ಕೆ ಯಾವಾಗಲೂ ಆ ಇಚ್ಛೆ ಇಲ್ಲ. ಚರ್ಚೆ ಆಗಬೇಕೆಂದು ಹೇಳಿದ್ದೇವೆ. ನಿನ್ನೆ ಕ್ವೆಶ್ಚನ್ ಅವರ್ ಆದಮೇಲೆ ತೆಗೆದುಕೊಳ್ಳಬೇಕು ಎಂದು ದೇವೆ ಗೌಡರು ಸಲಹೆ ಮಾಡಿದ್ದರು. ಸ್ಪೀಕರ್ ಅವರು ಮೊದಲೇ ಈ ವಿಷಯವನ್ನು ಅಜೆಂಡಾದಲ್ಲಿ ಹಾಕಿದ್ದಾರೆ. ತಮ್ಮ ನಿರ್ಣಯಕ್ಕೆ ನಾವು ತಲೆಬಾಗುತ್ತೇವೆ. ಆದರೆ

* ಅಧ್ಯಕ್ಷರ ಮೇರೆಗೆ ಪಾಲಿಸಿಕೊಳ್ಳಲಿಲ್ಲ.

ಎಂ. ಎಸ್. ಕೃಷ್ಣನ್ ಅವರು ಮತ್ತು ವೆಂಟರಾಮಯ್ಯನವರು ಮತ್ತು ಕೆಲವು ಗೆಳೆಯರು ರಾಷ್ಟ್ರೀಯ ಸಮಸ್ಯೆ ಒಂದರ ಬಗ್ಗೆ ಎತ್ತತಕ್ಕೆ ಪ್ರಯತ್ನ ಮಾಡಿದ್ದಾರೆ. ಈಗ ಅದರ ಬಗ್ಗೆ ಕೂಡ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವ ಬಗ್ಗೆ ಸ್ಪೀಕರ್ ಅವರು ಹೇಳಿದ್ದಾರೆ. ಅದನ್ನು ಕೂಡ ಒಪ್ಪಬೇಕಾಗುತ್ತದೆ. ಆದರೆ ಆ ಕಡೆಯವರು ಚರ್ಚೆಯನ್ನು ಮೊಟಕುಗೊಳಿಸಬೇಕು, ನಿಲ್ಲಿಸಬೇಕು ಎಂದು ಏನು ಹೇಳುತ್ತಿದ್ದಾರೆ ಅದು ನಿಮ್ಮೊಳಗೇ ಇರತಕ್ಕ ಅಂಜಿಕೆ. ಆ ಅಂಜಿಕೆ ನಿಮ್ಮದು, ನಮ್ಮದಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅದಕ್ಕೇ ಆ ಕಡೆಯವರು ಕೂಗಾಡುತ್ತಿರುವುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಪ್ರಧಾನಿಯವರ ಕೊಲೆ ಹಿಂದೆ ಇದ್ದವರು ಬಯಲಿಗೆ ಬರುತ್ತಿದ್ದಾರೆ ಎಂಬ ಆ ಅಂಜಿಕೆ ನಿಮಗೆ.

ಶ್ರೀ ಎಂ ವೀರಪ್ಪ ಮೊಯಿಲಿ.—ಇದು ಜವಾಬ್ದಾರಿ ಇರುವ ಮುಖ್ಯ ಮಂತ್ರಿಗಳು ಹೇಳುವ ಮಾತಲ್ಲ.

(ಗೊಂದಲ)

ಅಧ್ಯಕ್ಷರು.—ಅವರು ಏನು ಹೇಳುತ್ತಾರೆ ಎನ್ನುವುದನ್ನು ದಯವಿಟ್ಟು ಕೇಳಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಮ್ಮ ಜನತಾದಳ ಏನು ಮಾಡಿ ನಮಗೆ ಗೊತ್ತು. ಜೇಠ್ಮಲಾನಿಯವರಂಥವರನ್ನು ಆರಿಸಿ ರಾಜ್ಯಸಭೆಗೆ ಕಳುಹಿಸಿದ್ದಿರಿ. ಅವರು ಲಿಕ್ವಿಸ್ಟಾನಕ್ಕೆ ಸಪೋರ್ಟ್ ಮಾಡುವವರು.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.—ಜೇಠ್ಮಲಾನಿ ಅದನ್ನು ಅಲ್ಲಗಳೆದಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಚೀಫ್ ವಿಪ್‌ಸ್ಪರ್ ಏನು ಹೇಳುತ್ತಾರೆ ಕೇಳಿ.

ಶ್ರೀ ಬಿ. ಬಸವಲಿಂಗಪ್ಪ. ಮಾನ್ಯ ಅಧ್ಯಕ್ಷರೆ, ನಾನು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುತ್ತೇನೆ.

ಅಧ್ಯಕ್ಷರು.—ಈಗ ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆ ಬರುವುದಿಲ್ಲ. ರೂಲ್ ೬೮ರ ಪ್ರಕಾರ ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ನಾನು ರೂಲಿಂಗ್ ಕೊಟ್ಟಿದ್ದೇನೆ. ಮುಖ್ಯ ಮಂತ್ರಿಗಳು ಸದನದ ನಾಯಕರು. ಅವರು ಏನು ಹೇಳುತ್ತಾರೋ ಕೇಳಿ ಣಂ. ಆಜೆಂಡಾ ಪ್ರಕಾರ ನಾವು ಹೋಗೋಣ. ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಏನು ಹೇಳುತ್ತಾರೊ ನೋಡೋಣ. ನಾನು ಚೀಫ್ ವಿಪ್‌ಸ್ಪರ್‌ಗೆ ಮಾತನಾಡುವುದಕ್ಕೆ ಅಲೌ ಮಾಡಿದ್ದೇನೆ ಬೇರೆಯವರಿಗೆ ಅಲೌ ಮಾಡುವುದಿಲ್ಲ. ಈಗ ಯಾರು ಏನು ಹೇಳಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಚೀಫ್ ವಿಪ್‌ಸ್ಪರ್‌ಗೆ ಮಾತ್ರ ಮಾತನಾಡುವುದಕ್ಕೆ ಅಲೌ ಮಾಡಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

ಅಧ್ಯಕ್ಷರು.—ಈಗ ಪಾಯಿಂಟ್ ಆಫ್ ಆರ್ಡರ್ ಕೊಶ್ಚನ್ ಬರುವುದಿಲ್ಲ. ನಿಯಮ ೬೮ರ ಪ್ರಕಾರ ಚರ್ಚೆ ಮಾಡುವ ಬಗ್ಗೆ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೊ ಕೇಳಿ.

ಅಧ್ಯಕ್ಷರು.—ಆಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೆ, ಮುಖ್ಯ ಮಂತ್ರಿಗಳು.....

ಅಧ್ಯಕ್ಷರು.—ತಾವು ಏನು ಹೇಳಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ತಾವು ಕುಳಿತುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಈಗ ತಾವು ಅಪ್ಪಣೆ ಕೊಡಿಸಿದ್ದೀರಿ. ಎಂ. ಎಸ್. ಕೃಷ್ಣನ್ ಅವರು ಯಡಿಯೂರಪ್ಪನವರು ಮತ್ತು ವೆಂಕಟರಾಮಯ್ಯನವರು ಕೊಟ್ಟಿರುವ ಅಡ್ಜರ್ನ್‌ಮೆಂಟ್ ಮೋಷನನ್ನು ಕೊಶ್ಚನ್ ಆಫರ್ ಆದಮೇಲೆ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೀರಿ. ರೂಲ್ ೬೮ರ ಪ್ರಕಾರ ಪ್ರಸ್ತಾಪ ಆಗುವ ವಿಷಯವೂ ಇಲ್ಲಿ ಚರ್ಚೆಯಾಗಬೇಕು. ಕಾರಣದ ಕೈನಿಂದ ಕೊಲೆ ಆಗಿರುವುದನ್ನು ಆಮೇಲೆ ಚರ್ಚೆ ಮಾಡೋಣ. ಪ್ರಶ್ನೋತ್ತರ ವೇಳೆ ಆದಮೇಲೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಕೊಟ್ಟಾಗ ನನಗೂ ಅವಕಾಶ ಕೊಟ್ಟರೆ ನನ್ನ ಅಭಿಪ್ರಾಯವನ್ನು ಸಹ ಈ ಬಗ್ಗೆ ನಾನು ಹೇಳುತ್ತೇನೆ. ಈಗ ರೂಲ್ ೬೮ರ ಬಗ್ಗೆ ಚರ್ಚೆ ಪ್ರಾರಂಭ ಮಾಡಬೇಕಾದೀತು.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ಈ ಹಂತದಲ್ಲಿ ನನ್ನ ಕ್ರಿಯಾಲೋಪ ಇದೆ. ಮಾನ್ಯ ಸಭಾ ನಾಯಕರು ಠಕ್ಕರ್ ಕಮಿಷನ್ ರಿಪೋರ್ಟ್ ಬಗ್ಗೆ ಕೊಶ್ಚನ್ ಆಫರ್ ಆದಮೇಲೆ ಚರ್ಚೆ ಮಾಡುವುದಕ್ಕೆ ತಾವು ಅನುಮತಿ ಕೊಟ್ಟಿದ್ದೀರಿ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಲ್ಲ, ಇಲ್ಲ.

೧೧–೩೦ ಎ.ಎಂ.

ಶ್ರೀ ಎಚ್. ಡಿ. ದೇವೇಗೌಡ, ಈಗ ಏನು ನಿಲುವಳಿ ಸೂಚನೆಯನ್ನು ಕಳುಹಿಸಿದ್ದಾರೋ ಪ್ರಶ್ನೋತ್ತರ ವೇಳೆ ಆದ ಮೇಲೆ ಅದನ್ನು ಚರ್ಚೆಗೆ ತೆಗೆದುಕೊಳ್ಳುವುದು ಎಂದು ತಾವು ಹೇಳಿದ್ದೀರಿ ಎಂದು ಮಾನ್ಯ ಸಭಾ ನಾಯಕರು ಹೇಳಿದ್ದಾರೆ. ಆದರೆ ಆ ನಿಲುವಳಿ ಸೂಚನೆಗೆ ಅನುಮತಿಯನ್ನು ಕೊಡಬೇಕೇ ಎನ್ನುವುದರ ಬಗ್ಗೆ ತಾವು ಮೊದಲು ವಿಚಾರ ಮಾಡಬೇಕು. ತಾವು ಯಾವ ವಿಷಯ ಏನು ಹೇಳುತ್ತಾರೋ ಕೇಳೋಣ. ಮತ್ತೆ ವಿರೋಧ ಪಕ್ಷದ ನಾಯಕರ, ಸಿಐಬಿ, ಸಿಪಿಎಂ, ಬಿಜೆಪಿ, ಜನತಾ ಮುಖಂಡರ ಅಭಿಪ್ರಾಯವನ್ನು ತೆಗೆದುಕೊಂಡು ಮುಂದೆ ಸಾಗೋಣ.

(ಗೊಂದಲ)

ಶ್ರೀ ಕೆ. ಎಚ್. ಶ್ರೀನಿವಾಸ್.—ಅಧ್ಯಕ್ಷರೆ, I rise to a point of order.

(ಗೊಂದಲ)

ಅಧ್ಯಕ್ಷರು.—ಈಗ ಮುಖ್ಯ ಮಂತ್ರಿಗಳು ಮಾತನಾಡಲಿ. ಅವರು ಬಿಟ್ಟು ಬೇರೆ ಯಾರು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಶ್ರೀನಿವಾಸ್ ಅವರು ಕ್ರಿಯಾಲೋಪ ಎತ್ತಿದ್ದಾರೆ.

ಅಧ್ಯಕ್ಷರು.—ಇನ್ನೂ ಚರ್ಚೆ ಪ್ರಾರಂಭವಾಗಿಲ್ಲ. ಚರ್ಚೆ ಪ್ರಾರಂಭವಾದ ಮೇಲೆ ಯಾರು ಪಾಯಿಂಟ್ ಆಫ್ ಆರ್ಡರ್ ಎತ್ತುತ್ತಾರೋ ಅವರಿಗೆ ಉತ್ತರ ಸಿಗುತ್ತದೆ ಈಗ ಯಾರು ಯಾರು ಎಷ್ಟೆಷ್ಟು ಸಮಯ ಮಾತನಾಡಬೇಕೆಂದು ಸದನದ ನಾಯಕರನ್ನು ಕೇಳುತ್ತೇನೆ. ನಂತರ ನಿಮಗೂ ಕೇಳುತ್ತೇನೆ. ಮಾನ್ಯ ರಘುಪತಿಯವರು ತಮಗೂ ಅವಕಾಶ ಕೊಡಿ ಎಂದು ಹೇಳಿದ್ದಾರೆ. ನಾನು ಏನು ಹೇಳುತ್ತಿದ್ದೇನೆಂದರೆ, ಇಲ್ಲಿ ಸದನದ ನಾಯಕರು, ವಿರೋಧ ಪಕ್ಷದ ನಾಯಕರು ಹಾಗೂ ಉಳಿದ ನಾಯಕರೆಲ್ಲರ ಅಭಿಪ್ರಾಯವನ್ನು ಕೇಳಿ ಅದರಂತೆ ಮಾಡೋಣ.

(ಗೊಂದಲ)

ಅಧ್ಯಕ್ಷರು.—ನೀವು ಪಾಯಿಂಟ್ ಆಫ್ ಆರ್ಡರ್ ಎತ್ತಿದರೆ ಆ ಕಡೆಯಿಂದಲೂ ಪಾಯಿಂಟ್ ಆಫ್ ಆರ್ಡರ್ ಎತ್ತುತ್ತಾರೆ.

(ಗೊಂದಲ)

ಅಧ್ಯಕ್ಷರು.—ಯಾವುದೇ ವಿಷಯದ ಮೇಲೆ ಇನ್ನೂ ಚರ್ಚೆ ಪ್ರಾರಂಭವಾಗಿಲ್ಲ ಈಗ ಪ್ರಾರಂಭ ಮಾಡುವ ಹಂತದಲ್ಲಿ ಸದನದ ನಾಯಕರು ಏನು ಹೇಳುತ್ತಾರೋ ಅದನ್ನು ಕೇಳುತ್ತೇನೆ.

ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೋ ಅದನ್ನು ಕೇಳುತ್ತೇನೆ ನೋಡಿ ನೀವು ಒಂದು ಪಾಯಿಂಟ್ ಆಫ್ ಆರ್ಡರ್ ಎಂದರೆ ಇವರು ೧೦ ಮಂದಿ ಪಾಯಿಂಟ್ ಆಫ್ ಆರ್ಡರ್ ಎಂದು ಹೇಳುತ್ತಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಯಮ ೬೮ರ ಕೆಳಗೆ ನಾನು ಭಾಷಣ ಪ್ರಾರಂಭ ಮಾಡಲೇ?

ಅಧ್ಯಕ್ಷರು.—ಸ್ವಲ್ಪ ಇರಿ, ನಾನು ಅವರನ್ನು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಏಕೆ ಕೇಳಬೇಕು. ಅವರು ಹೇಳುವುದು, ಇವರು ಹೇಳುವುದೆಲ್ಲಾ ಕೇಳಬೇಕೇ?

ಅಧ್ಯಕ್ಷರು.—ಸಮಯ ನಿಗದಿ ಮಾಡುವ ಬಗ್ಗೆ ಅವರು ಹೇಳುವುದನ್ನೂ ಕೇಳುತ್ತೇನೆ. ನೀವು ಹೇಳುವುದನ್ನೂ ನಾನು ಕೇಳುತ್ತೇನೆ.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.—ಇದೇನು ನಿಯಮಾವಳಿ ಬೇಡವೇ?

ಅಧ್ಯಕ್ಷರು.—ತಾವೆಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ನಾನು ಮೊದಲು ಅವರನ್ನು ಕರೆದಿದ್ದೇನೆ. ಅವರು ಮಾತನಾಡಲಿ. ನಂತರ ವಿರೋಧ ಪಕ್ಷದ ನಾಯಕರಿಗೆ ಅವಕಾಶ ಕೊಡುತ್ತೇನೆ. ಮತ್ತೆ ನಿಮಗೂ ಅವಕಾಶ ಕೊಡುತ್ತೇನೆ. ನಾನು ಮೊದಲು ಸಭಾ ನಾಯಕರಿಗೆ ಕರೆದಿದ್ದೇನೆ. ನಾನು ಈಗಾಗಲೇ ರೂಲಿಂಗ್ ಕೊಟ್ಟು ಆಗಿದೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಸದನದ ನಾಯಕರ ಅಭಿಪ್ರಾಯವನ್ನು ನಾನು ಕೇಳಬೇಕಾಗುತ್ತದೆ. ಅವರ ಅಭಿಪ್ರಾಯ ಕೇಳಬಾರದು ಎಂದು ಹೇಳುವುದು ಸರಿಯಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಯಾರಿಗೂ ಮಾತನಾಡಲು ಅವಕಾಶ ಕೊಡುವುದಿಲ್ಲ. ನಾನು ಸದನದ ನಾಯಕರ ಅಭಿಪ್ರಾಯವನ್ನು ಕೇಳುತ್ತೇನೆ. ಈಗ ಬೇರೆಯವರು ಮಾತನಾಡಿದರೆ ನಾನು ಅಲೋ ಮಾಡುವುದಿಲ್ಲ. Nothing will go on record.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಶ್ರೀನಿವಾಸ್‌ರವರ ಪಾಯಿಂಟ್ ಆಫ್ ಆರ್ಡರ್ ಏನಿದೆ ಎಂದರೆ, ಮಾನ್ಯ ದೇವೇಗೌಡರು ಹೇಳಿದ ವಿಚಾರದಲ್ಲಿ ಹೇಳುತ್ತಾರೆ. ಅದಕ್ಕೆ ನಾನು ಉತ್ತರ ಕೊಡುತ್ತೇನೆ. ಈಗ ಅವರು ಏನು ಹೇಳುತ್ತಾರೋ ಅದನ್ನು ಹೇಳಲಿ, ಆಮೇಲೆ ನಾನು ಉತ್ತರ ಕೊಡುತ್ತೇನೆ.

SRI K. H. SRINIVAS.—I am really thankful to the Hon. Leader. He has appreciated my position. ನನ್ನದೇನು ಪಾಯಿಂಟ್ ಆಫ್ ಆರ್ಡರ್ ಅಂದರೆ, ಮಾನ್ಯ ದೇವೇಗೌಡರು ಏನು ಹೇಳಿದರು ಅದನ್ನು ನಾನ್ ಸಬ್‌ಸ್ಟಾನ್ಸಿಯೇಟ್ ಮಾಡುತ್ತಿದ್ದೇನೆ. ನಿಲುವಳಿ ಸೂಚನೆ ಈ ಸದನದಲ್ಲಿ ಚರ್ಚೆಯಾಗಬೇಕಾದರೆ ನಮ್ಮ ರೂಲ್ಸ್ ಪ್ರಕಾರ ಮಾಡಬೇಕು. What is the essence of adjournment motion It is concluded with censuring the Government, the Government which is responsible to this House and not any other Government. ಸರ್ಕಾರಕ್ಕೆ ಯಾವುದಕ್ಕೆ ಉತ್ತರ ಹೇಳುವುದಕ್ಕೆ ಶಕ್ತಿಯಿಲ್ಲವೋ ಆ ವಿಚಾರದಲ್ಲಿ ನಿಲುವಳಿ ಸೂಚನೆ ತರುವುದಕ್ಕೆ ಹೇಗೆ ಸಾಧ್ಯ?

Adjournment motion is next only to No confidence motion. Suppose if, an adjournment motion is carried, that is an automatic censure against the Government. ಆದ್ದರಿಂದ ಇಲ್ಲಿ ನಿಲುವಳಿ ಸೂಚನೆಯನ್ನು ಯಾವುದರ ಬಗ್ಗೆ ತರಬಹುದು? ಸರ್ಕಾರದ ಲೋಪದೋಷಗಳನ್ನು ಬೆಟ್ಟು ಮಾಡಿ ಕೋರಿಸಲಿಕ್ಕೆ ನಿಲುವಳಿ ಸೂಚನೆ ಮೂಲಕ ವಿಚಾರವನ್ನು ಪ್ರಸ್ತಾಪ ಮಾಡಬಹುದು. ಕೇರಳ ಸರ್ಕಾರ, ಮದ್ರಾಸ್ ಸರ್ಕಾರ, ದೆಹಲಿ ಸರ್ಕಾರ ಹೀಗೆ ಎಲ್ಲವನ್ನೂ ಇಲ್ಲಿ ಚರ್ಚೆ ಮಾಡುವುದಾದರೆ ವರ್ಷದ ೩೬೫ ದಿವಸಗಳು ಅದೇ ಚರ್ಚೆಯನ್ನು ಮಾಡಬೇಕಾಗುತ್ತದೆ. You can also bring in all sorts under the colour of adjournment motion. Please for heaven-sake don't open the flood gate. If you want to do it, it ನನ್ನು ಮೊದಲು ತೆಗೆದುಕೊಳ್ಳುತ್ತೀರೋ ಗೊತ್ತಿಲ್ಲ, ಪ್ರಶ್ನೋತ್ತರ ವೇಳೆಯಾದ ಮೇಲೆ ತೆಗೆದು ಕೊಳ್ಳುತ್ತೀರೋ ಅಥವಾ ಆದಕ್ಕೆ ಮುಂಚಿತವಾಗಿ ತೆಗೆದುಕೊಳ್ಳುತ್ತೀರೋ ಆ ವಿಷಯ ಬೇರೆ. ಒಂದು ನಿಲುವಳಿ ಸೂಚನೆಯನ್ನು ಎಲ್ಲಾ ವಿಷಯಗಳನ್ನು ಮುಂದೂಡಿ ಚರ್ಚೆಗೆ ತೆಗೆದುಕೊಳ್ಳ ಬೇಕಾಗುತ್ತದೆ. ಕೆಲವು ಸಾರಿ ಇಲ್ಲಿ ನಮ್ಮ ದೇಶದಲ್ಲಿ ಅಥವಾ ನಮ್ಮ ರಾಜ್ಯದಲ್ಲಿ ಇಲ್ಲಿಯವರೆಗೆ ನಡೆದು ಕೊಂಡು ಬಂದ ಸಂಪ್ರದಾಯ. ಠಕ್ಕರ್ ಆಯೋಗದ ವರದಿಯನ್ನು ಈ ಸಭೆಯ ಮುಂದಿಡ ಬೇಕಾದರೆ ಆ ಒಂದು ಆಯೋಗವನ್ನು ಈ ಸರ್ಕಾರ ರಚನೆ ಮಾಡಿದ್ದರೆ, ಆ ವರದಿಯನ್ನು ಸಭೆಯ ಮುಂದಿಡಬೇಕಾಗುತ್ತದೆ. ಹಾಗೂ ಆಮೇಲೆ ಚರ್ಚೆಗೆ ಅನುಮತಿಯನ್ನು ಕೊಡಬೇಕಾಗುತ್ತದೆ. ಈ ಆಯೋಗವನ್ನು ಈ ಸರ್ಕಾರ ರಚನೆ ಮಾಡಿದ್ದರೆ ಆಗ ಈ ಸದನದ ವ್ಯಾಪ್ತಿಯಲ್ಲಿ ಚರ್ಚೆ ಮಾಡು ವುದಕ್ಕೆ ಬರಬಹುದೇಂಬುದು ನನ್ನ ಭಾವನೆ. ಇಲ್ಲದ ಸಂಪ್ರದಾಯವನ್ನು ಹಾಕಲಿಕ್ಕೆ ಸಾಧ್ಯವಿಲ್ಲ. ತಮ್ಮ ಕಾಲದಲ್ಲೂ ಸಾಧ್ಯವಾಗುವುದಿಲ್ಲ. ಮಾನ್ಯ ಸಭಾ ನಾಯಕರ ಕಾಲದಲ್ಲೂ ಅದು ಸಾಧ್ಯವಾಗು ವುದಿಲ್ಲ. ಅದನ್ನು ಇಡಬೇಕಾದರೆ ಪಾರ್ಲಿಮೆಂಟ್‌ನ ಮುಂದೆ ಇಡಬಹುದೇ ಹೊರತು ಇಲ್ಲಿ ಇಡುವುದಕ್ಕೆ ಸಾಧ್ಯವಿಲ್ಲ. ಶಾಸನ ಸಭೆಯ ಮುಂದೆ ಅದನ್ನು ಮಂಡಿಸುವುದಕ್ಕೆ ಸಾಧ್ಯವಿಲ್ಲ. ಆದು ತಮ್ಮ ವ್ಯಾಪ್ತಿಯಲ್ಲೂ ಬರುವುದಿಲ್ಲ. ಪಾರ್ಲಿಮೆಂಟ್‌ನಲ್ಲಿ ಪ್ರಶ್ನೆ ಮಾಡಬೇಕಾಗುತ್ತದೆಯೇ ಹೊರತು ಈ ಸಭೆಯ ಮುಂದೆ ಮಾಡುವುದಕ್ಕೆ ಸಾಧ್ಯವಿಲ್ಲ. ಆ ಬಗ್ಗೆ ಮರುಚಿಂತನೆ ಮಾಡುವುದು ಅವಶ್ಯಕ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ದೇವೇಗೌಡರ ಮಾತನ್ನು ನಾನು ಒಪ್ಪುವುದಿಲ್ಲ ಆದಕ್ಕೆ ನಮ್ಮ ಸಮ್ಮತಿ ಇಲ್ಲ. ಠಕ್ಕರ್ ಆಯೋಗದ ವಿಷಯ ಇಡೀ ದೇಶಕ್ಕೆ ಗೊತ್ತಿರುವ ವಿಚಾರ. ಇದು ತುಂಬಾ ಪ್ರಾಮುಖ್ಯತೆಯ ವಿಷಯವಾಗಿರುವುದರಿಂದ ಪ್ರಶ್ನೋತ್ತರ ವೇಳೆ ಆದ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಇದು ಚರ್ಚೆಯಾಗಬೇಕು. ಇಡೀ ದೇಶದ ಜನತೆಯಲ್ಲಿ ಈ ಬಗ್ಗೆ ಸಂಶಯ ಪತ್ರಿಕೆಗಳ ಮೂಲಕ ಬಂದಿರುವುದರಿಂದ, ಆ ವಿಚಾರವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಆ ರೀತಿಯ ಅವಕಾಶ ಮಾಡಿಕೊಡು ವುದಕ್ಕೆ ತಮಗೆ ಅಧಿಕಾರ ಇದೆ. ಚರ್ಚೆ ಪ್ರಾರಂಭವಾಗಲಿ, ನಮ್ಮ ಪ್ರಿಲಿಮಿನರಿ ಸಬ್‌ಮಿಷನ್ ಮಾಡಿದ ಮೇಲೆ ತಾವು ಏನು ತೀರ್ಮಾನ ತೆಗೆದುಕೊಳ್ಳುತ್ತೀರೋ ಅದನ್ನು ತೆಗೆದುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ಈಗ ಜಿ. ವಿ. ಕೆ. ರಾವ್ ರವರ ವರದಿ ಕೂಡ ಸಭೆಯ ಮುಂದೆ ಮುಂಡಿಸಿಲ್ಲ. ಆದ್ದರಿಂದ ಅದರ ಬಗ್ಗೆಯೂ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುವುದಕ್ಕೆ ಆಗುತ್ತದೆಯೇ? ಆದ್ದರಿಂದ ಈ ವಿಚಾರದಲ್ಲಿ ದೇವೇಗೌಡರು ಹೇಳಿದ್ದುದು ಸರಿಯಲ್ಲ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಾಗಾದರೆ ಇವರು ಏಕೆ ವಿರೋಧ ಪಕ್ಷದ ಕಡೆ ಕುಳಿತಿದ್ದಾರೆ. ಆ ಕಡೆಯೇ ಹೋಗಿ ಕುಳಿತುಕೊಳ್ಳಲಿ

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ಅವರು ಏಕೆ ಈ ಕಡೆ ಕುಳಿತುಕೊಳ್ಳಬೇಕು. ಅಲ್ಲಿ ಕುಳಿತು ಕೊಂಡರೆ ಏಮಗೆ ಏನಾಗುತ್ತದೆ?

(ಗೊಂದಲ)

ಅಧ್ಯಕ್ಷರು.—ಒಂದೇ ನಿಯಮದ ಮೇಲೆ ಮೊದಲು ಚರ್ಚೆಯಾಗಬೇಕು ಎಂದು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. ಮುಖ್ಯ ಮಂತ್ರಿಗಳು ಏನೋ ಹೇಳುವವರು ಇದ್ದಾರೆ, ಅವರು ಏನು ಹೇಳುತ್ತಾರೋ ಹೇಳಲಿ. ದಯವಹಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ. ಎಚ್. ಶ್ರೀನಿವಾಸ್.—ಅಧ್ಯಕ್ಷರೆ, ನನ್ನದು Point of order ಇದೆ.

ಅಧ್ಯಕ್ಷರು. ನಿಮಗೂ ಅವಕಾಶ ಮಾಡಿಕೊಡುತ್ತೇನೆ. ಈಗ ಕುಳಿತುಕೊಳ್ಳಿ. ಮುಖ್ಯ ಮಂತ್ರಿಗಳನ್ನು ಕರೆದಿದ್ದೇನೆ. ಅವರು ಏನು ಹೇಳುತ್ತಾರೋ ಹೇಳಲಿ. ಚರ್ಚೆ ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಅವರು ಏನು ಹೇಳುತ್ತಾರೋ ಹೇಳಲಿ. ಅವರು ಎದ್ದು ನಿಂತ್ತಿದ್ದಾರೆ ರೂಲ್ ೬೮ರ ಬಗ್ಗೆ ಚರ್ಚೆಯಾಗಬೇಕಾದ ವಿಷಯದ ಮೇಲೆ ಅವರು ಏನು ಹೇಳುತ್ತಾರೋ ಹೇಳಲಿ.

SRI K. H. SRINIVAS.—Sri Deve Gowda has raised a point of order. ಅದರ ಬಗ್ಗೆ either you allow me to support his point of order or to raise as an independent point of order. whatever it may be, but let the Chief Minister answer only after hearing me.

ಅಧ್ಯಕ್ಷರು.—ಇಲ್ಲ ಕುಳಿತುಕೊಳ್ಳಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮುಖ್ಯ ಮಂತ್ರಿಗಳು ಉತ್ತರ ಹೇಳುವುದು ಇದ್ದೇ ಇದೆ. ಅದನ್ನು ಆಮೇಲೆ ಹೇಳಲಿ. ಅದಕ್ಕೆಮೊದಲು ನಾನು ಹೇಳುವುದನ್ನು ಮೊದಲು ಕೇಳಿ.

ಶ್ರೀ ಎಂ. ಪಿ. ಪ್ರಕಾಶ್.—ದೇವೇಗೌಡರು ಕ್ರಿಯಾಲೋಪವನ್ನು ಎತ್ತಿದ್ದಾರೆ. ಅದರ ಮೇಲೆ ಶ್ರೀನಿವಾಸ್‌ರವರು ಮತ್ತೆ ಕ್ರಿಯಾಲೋಪವನ್ನು ಎತ್ತುವುದಕ್ಕೆ ಎಲ್ಲಿ ಅವಕಾಶ ಇದೆ? There cannot be a point of order over another point of order.

ಅಧ್ಯಕ್ಷರು.—ಮುಖ್ಯ ಮಂತ್ರಿಗಳು ಏನು ಹೇಳುತ್ತಾರೋ ಅದನ್ನು ಹೇಳಲಿ.

ಶ್ರೀ ಎಂ. ಪಿ. ಪ್ರಕಾಶ್.—ಅಧ್ಯಕ್ಷರೆ, Let him dispose of the point of order raised by Sri Deve Gowda.

ಅಧ್ಯಕ್ಷರು.—ಶ್ರೀನಿವಾಸ್‌ರವರೆ, ನಿಮ್ಮ ಪಾಯಿಂಟ್ ಆಫ್ ಆರ್ಡರ್‌ನ ಪ್ರಶ್ನೆ ಇಲ್ಲಿ ಬರುವುದಿಲ್ಲ. ರೂಲ್ ೬೮ರ ಕೆಳಗೆ ಚರ್ಚೆ ಮಾಡಬೇಕಾದುದು ಇದೆ. ಅದಕ್ಕೆ ಸಭಾನಾಯಕರು ಹಾಗೂ ವಿರೋಧಪಕ್ಷದ ನಾಯಕರು ಏನು ಹೇಳುತ್ತಾರೆಂಬುದನ್ನು ಕೇಳಬೇಕಾಗುತ್ತದೆ. ಸಭೆಯ ಕಾರ್ಯಕಲಾಪ ಸರಿಯಾಗಿ ನಡೆಯಬೇಕಾದರೆ, ಅವರಿಬ್ಬರನ್ನೂ ಕೇಳಬೇಕಾಗುತ್ತದೆ. ಆಮೇಲೆ ಮಲ್ಲಿಕಾರ್ಜುನ ಖರ್ಗೆಯವರನ್ನೂ ಕೇಳುತ್ತೇನೆ. ನಾಗರತ್ನಮ್ಮನವರನ್ನೂ ಕೇಳುತ್ತೇನೆ.

(ಗೊಂದಲ)

ನಾನು ಅವರಿಗೂ ಅವಕಾಶ ಕೊಡುತ್ತೇನೆ. ಇವರಿಗೂ ಅವಕಾಶ ಕೊಡುತ್ತೇನೆ. ನಾನು ನಿಮ್ಮೆಲ್ಲರ ರೆಪ್ರೆಸೆಂಟಿಟೀವ್. ಈ ಸದನವನ್ನು ನಡೆಸಬೇಕಾದರೆ ವಿರೋಧ ಪಕ್ಷದ ನಾಯಕರ ಸಹಕಾರ ಬೇಕು, ಸದನದ ನಾಯಕರ ಸಹಕಾರ ಬೇಕು. ಹಾಗೂ ಎಲ್ಲ ಪಕ್ಷಗಳ ನಾಯಕರ ಸಹಕಾರವೂ ಬೇಕು. ನಾಯಕರುಗಳ ಸಹಕಾರ ಎಂದರೆ ಅವರ ಸದಸ್ಯರೆಲ್ಲರ ಸಹಕಾರ ಎಂದು ಅರ್ಥ. ಈಗ ಮೇಳೆ ನಿಗದಿ ಮಾಡುವ ಬಗ್ಗೆ ಮುಖ್ಯ ಮಂತ್ರಿಗಳ ವಿರೋಧ ಪಕ್ಷದ ನಾಯಕರ, ಉಪನಾಯಕರ ಅಭಿಪ್ರಾಯವನ್ನು ಕೇಳುತ್ತೇನೆ. ನಿಯಮ ೬೮ರ ಚರ್ಚೆಗೆ ಅವಕಾಶ ಕೊಡಲಾಗಿದೆ. ಮೇಳೆ ಬಗ್ಗೆ ಮುಖ್ಯ ಮಂತ್ರಿಗಳು would not be peaceful. * *

ಶ್ರೀ ಆರ್. ವೆಂಕಟರಾಮಯ್ಯ.—ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ.

(Interruptions)

---

* * ಅಧ್ಯಕ್ಷರ ಆದೇಶದ ಮೇರೆಗೆ ತೆಗೆದುಹಾಕಲಾಗಿದೆ.

ಅಧ್ಯಕ್ಷರು.—ನಿಲುವಳಿ ಸೂಚನೆಯನ್ನು ಸಭೆಗೆ ತೆಗೆದುಕೊಂಡಿಲ್ಲ. ಪ್ರಶ್ನೋತ್ತರ ವೇಳೆ ಆದಮೇಲೆ ಚರ್ಚೆ ಮಾಡೋಣ ಅಂದರೂ ಕೂಡ ಅದು ಪ್ರಿಲಿಮಿನರಿ ಸಬ್‌ಮಿಷನ್ ಆಗಬಹುದು. ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೇ ಅಥವಾ ಬೇಡವೇ ಎನ್ನುವ ಪ್ರಶ್ನೆಯಿದೆ. ಚರ್ಚೆಯಾಗ ಬೇಕೆಂದು ಹೇಳಬೇಕಾದರೂ ಅದಕ್ಕೆ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಡಬೇಕು. ಅದಕ್ಕೆ ತಾವೇನು ಹೇಳಿದ್ದೀರಿ ಎಂದರೆ ಅವಿವೇಕತನ ಎಂದು ಹೇಳಿದ್ದೀರಿ. ನೀವು ಮಾತನಾಡುವಾಗ ಯಾಬ್ದಾರಿತನದಿಂದ ಮಾತನಾಡಬೇಕು.

(ಗೊಂದಲ)

ಅಧ್ಯಕ್ಷರು.—ನೀವು ಮಾತನಾಡುವಾಗ ಅವಿವೇಕತನ ಎಂದು ಹೇಳಿದ್ದೀರಿ. ಇದುವರೆಗೆ ಮಾತನಾಡಿದ ಯಾರೂ ಸಹ ಆ ತರಹ ಹೇಳಿಲ್ಲ. ತಾವು ಆ ತರಹ ಮಾತನಾಡಬಾರದು. I have expunged that word.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಶ್ರೀನಿವಾಸ್‌ರವರ ವಾದವನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಲಕ್ಕಪ್ಪ.—ಎಷ್ಟೋ ಮಹತ್ವವಾದ ವಿಚಾರಗಳನ್ನು ತಾವು ಕಾಲಿಂಗ್ ಅಟೆನ್‌ಷನ್ ಆಗಿ ಪರಿವರ್ತನೆ ಮಾಡಿದ್ದೀರಿ.

ಅಧ್ಯಕ್ಷರು.—ಮಾನ್ಯ ಶ್ರೀನಿವಾಸ್‌ರವರು ಹೇಳಿದ್ದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೆ, ಹಿಂದಿನ ಸೀಟಿನಲ್ಲಿರುವವರನ್ನು ತಾವು ನೋಡಿ. ಇದು ಸರ್ಕಾರದ ಆಯವ್ಯಯದ ಚರ್ಚೆ, ಇದು ಯಾವುದೇ ವರದಿಯ ಚರ್ಚೆಯಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸೆಕ್ಷನ್ ೫೯ ಮತ್ತು ೬೧ರಲ್ಲಿ ಸ್ಪಷ್ಟವಾಗಿ ಈ ರೀತಿ ಇದೆ :—"ಸಾರ್ವಜನಿಕ ಮಹತ್ವವುಳ್ಳ ಒಂದು ಜರೂರು ವಿಷಯದ ಮೇಲೆ ಚರ್ಚೆ ನಡೆಸುವ ಉದ್ದೇಶಕ್ಕಾಗಿ ನಿಲುವಳಿ ಸೂಚನೆಯನ್ನು ತರುವ ಹಕ್ಕು ಕೆಳಕಂಡ ನಿರ್ಬಂಧಗಳಿಗೆ ಒಳಪಟ್ಟಿರತಕ್ಕದ್ದು" ಎಂದು ಇದೆ.

(ಗೊಂದಲ)

ಶ್ರೀ ಚಂದ್ರಕಾಂತ. ಜಿ ಬೆಲ್ಲದ್.—ನಾವು ರಾಜ್ಯದ ಭದ್ರತೆ ಬಗ್ಗೆ ಮಾತನಾಡಬೇಕಾಗಿದೆ.

ಅಧ್ಯಕ್ಷರು.—ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಎಲ್ಲರೂ ದಯವಿಟ್ಟು ಕುಳಿತು ಕೊಳ್ಳಿ. ಈ ತರಹ ಮಾತನಾಡಿದರೆ ಹೇಗೆ? ಈಗ ಶ್ರೀ ಎಂ. ಎಸ್. ಕೃಷ್ಣನ್ ಅವರು ಮಾತನಾಡಲಿ. ಬೇರೆ ಯಾರೂ ಮಾತನಾಡುವುದು ಬೇಡ. ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡಲಿ.

ಶ್ರೀ ಬಿ. ಲಕ್ಕಪ್ಪ.—ಇಲ್ಲಿ ಮಾತನಾಡುವುದಕ್ಕೆ ಬೇಕಾದಷ್ಟು ಸಮಸ್ಯೆಗಳಿವೆ. ಅದಕ್ಕೆ ನಿಮ್ಮ ಹತ್ತಿರ ಅವಕಾಶ ಇಲ್ಲ.

(ಗೊಂದಲ)

ಅಧ್ಯಕ್ಷರು.—ಶ್ರೀ ಕೃಷ್ಣನ್‌ರವರೇ, ನೀವು ಮಾತನಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ನನ್ನ ಅಭಿಪ್ರಾಯ ಇಷ್ಟೆ, ಅದನ್ನು ತಾವು ಒಪ್ಪುತ್ತೀರೋ, ಬಿಡುತ್ತೀರೋ ಅದು ಬೇರೆ ಸಮಾಚಾರ. ಅದು ನಿಮಗೆ ಬಿಟ್ಟಿದ್ದುದು. ಪ್ರಿಲಿಮಿನರಿಯಾಗಿ ನಾನು ಇವತ್ತಿನ ದಿವಸ ಇದರ ಬಗ್ಗೆ ಮಾತನಾಡುತ್ತಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಏನಿದು? ಪ್ರಶ್ನೋತ್ತರ ವೇಳೆಯಾದ ಮೇಲೆ ಇದನ್ನು ತನ್ನಿ. ಆಮೇಲೆ ಕೇಳೋಣ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮಗೆ ಶ್ರೀ ಶ್ರೀನಿವಾಸ್ ಆದರೆ ಬೇಕು, ಶ್ರೀ ಕೃಷ್ಣನ್ ಆದರೆ ಬೇಡವೇನು?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದರಲ್ಲೇ ಕಾಲ ಕಳೆಯಬೇಕೇನು ಹಾಗಾದರೆ?

ಅಧ್ಯಕ್ಷರು.—ಶ್ರೀ ಶ್ರೀನಿವಾಸ್ ಅವರು ಹೇಳಿದ್ದಾರೆ. ಈಗ ಇವರೂ ಹೇಳಲಿ.

ಶ್ರೀ ಎಂ. ಎಸ್. ಕೃಷ್ಣನ್.—ಶ್ರೀ ದೇವೇಗೌಡರು ಕ್ರಿಯಾಲೋಪವನ್ನು ಎತ್ತಿದರು. ಶ್ರೀ ಶ್ರೀನಿವಾಸ್ ಅವರು ಅದಕ್ಕೆ ಬೆಂಬಲವನ್ನು ಕೊಟ್ಟರು. ಮತ್ತು ಅದನ್ನು ಸಮರ್ಥನೆ ಮಾಡಿದರು. ಈಗ ಉತ್ತರವನ್ನು ಮುಖ್ಯ ಮಂತ್ರಿಯವರು ಕೊಡುತ್ತಾರೆ.....

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ರಾಜ್ಯದ ಸಮಸ್ಯೆ ಬಗ್ಗೆ ಇವರು ಮಾತನಾಡುತ್ತಾರೆಯೇ?

(ಗೊಂದಲ)

ಅಧ್ಯಕ್ಷರು.—ಈಗ ಯಾರು ಏನೇ ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಶ್ರೀ ಕೃಷ್ಣನ್ ಅವರು ಮಾತನಾಡಿದ್ದು ಬಿಟ್ಟರೆ ಬೇರೆ ಯಾರು ಮಾತನಾಡಿದರೂ ಕಡತಕ್ಕೆ ಹೋಗುವುದಿಲ್ಲ. ನಾನು ಶ್ರೀ ಕೃಷ್ಣನ್ ಅವರನ್ನು ಕರೆದಿದ್ದೇನೆ. ಮಧ್ಯದಲ್ಲಿ ಯಾರೂ ಮಾತನಾಡಬಾರದು.

(ಗೊಂದಲ)

MR. SPEAKER.—Dont record,

ಅಧ್ಯಕ್ಷರು.—ಶ್ರೀ ಕೃಷ್ಣನ್‌ರವರೇ, ನೀವು ಮಾತನಾಡಿ.

†**ಶ್ರೀ ಎಂ. ಎಸ್. ಕೃಷ್ಣನ್.**—ಈಚರ್ಚೆಗೆ ವಿರೋಧ ತರಬೇಕೆಂಬ ಅಭಿಪ್ರಾಯ ನನ್ನದಲ್ಲ. ತಮ್ಮ ಅಭಿಪ್ರಾಯವನ್ನು ತಾವು ಹೇಳಿದ್ದೀರಿ. ತಮ್ಮ ಅಭಿಪ್ರಾಯಕ್ಕೆ ಮನ್ನಣೆ ಕೊಡುವಂಥ ಜನ ನಾವು. ಒಂದು ವಿಷಯವೆಂದರೆ ಶ್ರೀ ದೇವೇಗೌಡರು ಒಂದು ಪ್ರಶ್ನೆಯನ್ನು ಎತ್ತಿ ನಿಯಮ ೫೯ರ ಪ್ರಕಾರ ಎಲ್ಲಾ ಕಾರ್ಯಕಲಾಪಗಳನ್ನು ಬಿಟ್ಟು ಅದನ್ನು ಮೊದಲು ತೆಗೆದುಕೊಳ್ಳಬೇಕು. ಇದಕ್ಕೆ ಒಂದು ಪರಂಪರೆ ಇದೆಯೆಂದು ಹೇಳಿದರು. ನಿಜಾಂಶ ಇದು. ಇದನ್ನು ನಾನು ಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಇದು ತಮಗೆ ಬಿಟ್ಟಿದ್ದು. ಇದಕ್ಕೆ ಪ್ರಿಲಿಮಿನರಿಯಾಗಿ ಹೇಳಲು ಅವಕಾಶ ಕೊಡಬೇಡಿ ಅಥವಾ ಕೊಡಬಾರದು ಎನ್ನುವುದು ತಮಗೆ ಬಿಟ್ಟಿದ್ದು. ಇವತ್ತು ಪ್ರಿಲಿಮಿನರಿಯಾಗಿ ಹೇಳುವುದಕ್ಕೆ ಮುಂಚೆ ನೀವು ನಿಮ್ಮ ಅಭಿಪ್ರಾಯ ಕೊಟ್ಟುಬಿಟ್ಟಿರಿ. ಪ್ರಶ್ನೋತ್ತರ ವೇಳೆ ಆದಮೇಲೆ ಮಾತನಾಡಲು ತಿಳಿಸಿ ಎಂದು ಹೇಳಿದಿರಿ. ಅದಕ್ಕೆ ನನ್ನ ವಿರೋಧ ಇಲ್ಲ. ಆದರೆ ನನ್ನ ಅಭಿಪ್ರಾಯ ಏನು ಎಂದರೆ, ಪ್ರಶ್ನೋತ್ತರ ವೇಳೆ ಆದಮೇಲೆ ಈ ವಿಷಯವನ್ನೂ ಕೂಡ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕು ಎಂದು ನಾನು ನಿಮ್ಮನ್ನು ಕೇಳಿಕೊಳ್ಳುವುದು.

ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ನಡವಳಿಕೆಗಳನ್ನು ದಾಖಲು ಮಾಡಿಕೊಳ್ಳಲಿ. ಮತ್ತೆ ಎರಡನೆಯದಾಗಿ ಇವತ್ತಿನದಿವಸ ಈ ವಿಷಯದ ಮೇಲೆ ಚರ್ಚೆ ಮಾಡುವುದು ಸರಿಯಲ್ಲ ಎಂದು ಮಾನ್ಯ ಶ್ರೀನಿವಾಸ್‌ರವರು ಹೇಳಿದಂಥ ಮಾತನ್ನು ನಾನು ಒಪ್ಪುವುದಕ್ಕೆ ತಯಾರಿಲ್ಲ. ಇದು ಇಡೀ ದೇಶಕ್ಕೆ ಸಂಬಂಧಪಟ್ಟ ವಿಚಾರವಾದ್ದರಿಂದ ಮುಖ್ಯವಾಗಿ ಇದರ ಬಗ್ಗೆ ತೀರ್ಮಾನ ಮಾಡಿ, ಯಾವಾಗ ಅವಕಾಶ ಕೊಡುತ್ತೀರೋ ಕೊಡಿ. ರೂಲ್ ೬೮ರ ಪ್ರಕಾರ ಏನು ಮಾಡಬೇಕೋ ಮಾಡಿ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಶ್ರೀನಿವಾಸ್‌ರವರು ಎಂದು ವಾತನ್ನು ಉಪಯೋಗಿಸಿದರು. 'ಅವಿವೇಕ' ಎಂದು ಹೇಳಿದರು. ಹಕ್ಸ್‌ರ್ ಅಂಡ್ ಕಾಲ್‌ನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ;

"The crucial test always is as to whether the question proposed to be raised has arisen suddenly and created an emergent situation of such a character that there is a prima facie case of urgency and the House must therefore leave aside allother bussiness and take up the consideration of the urgent matter at the appointed hour. The urgency must be of such a character that the matter really brooks no delay and should be discussed on the same day the notice has been given."

ಎಂದು ಇದೆ. ಅಡ್ಜರ್ನ್‌ಮೆಂಟ್ ಕೊಟ್ಟಿರುವುದನ್ನು ಓದುತ್ತೇನೆ.

(INTERRUPTIONS)

SRI K. H. SRINIVAS.—You also read this:

The primary object of an adjournment motion is to draw the attention of the Government to a matter of urgent public importance so as to criticise the decision of the Government in an urgent matter in regard to which a motion or resolution with proper notice will be too late."

ಶ್ರೀ ಆರ್. ವೆಂಕಟರಾಮಯ್ಯ.—ಅದನ್ನೂ ಓದುತ್ತೇನೆ...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಪ್ರಿಮಿನರಿ ಸಬ್ ಮಿಷನ್ ಮಾಡುತ್ತಿದ್ದಾರೆ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪ್ರಶ್ನೋತ್ತರವಾದ ಮೇಲೆ ತೆಗೆದುಕೊಳ್ಳುತ್ತೇನೆಂದು ಹೇಳಿದ ಮೇಲೆ ಈ ಪುರಾಣ ಎಲ್ಲಾ ಏಕೆ ?

ಶ್ರೀ ಆರ್. ವೆಂಕಟರಾಮಯ್ಯ.—ತಾವು ಈಗಾಗಲೇ ಫೈಂಡಿಂಗ್ಸ್ ಕೊಟ್ಟಿದ್ದೀರಿ, ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೀರಿ. ಮಾನ್ಯ ದೇವೇಗೌಡರು ಎತ್ತಿರುವ ಕ್ರಿಯಾಲೋಪ ಸರಿಯಲ್ಲ. ಶ್ರೀಮತಿ ಇಂದಿರಾಗಾಂಧಿಯವರನ್ನು ಯಾರು ಕೊಲೆ ಮಾಡಿದ್ದಾರೆ. ಅದರಲ್ಲಿ ಏನು ಸಂಚು ಇದೆ ಎಂಬುದು ಪ್ರಪಂಚಕ್ಕೇ ಗೊತ್ತಾಗಲಿ...

(ಗೊಂದಲ)

ಅಧ್ಯಕ್ಷರು.—ನಾನು ಯಾರು ಮಾತನಾಡುವುದುಬೇಡ ಎಂದು ಹೇಳಿದೆ. ಆದರೆ ಶ್ರೀನಿವಾಸ ರವರು ಸತ್ಸಂಪ್ರದಾಯ ಹಾಕಿಕೊಟ್ಟರು. ಆನಂತರ ಮಾನ್ಯ ಕೃಷ್ಣನ್‌ರವರನ್ನು ಕೇಳಿದೆ. ನಂತರ ವೆಂಕಟರಾಮಯ್ಯನವರು ಹೇಳಿದರು, ಯಡಿಯೂರಪ್ಪನವರನ್ನೂ ಕೇಳುತ್ತೇನೆ. ಚೀಪ್ ಮಿನಿಸ್ಟರು ದೇವೇಗೌಡರು ಹೇಳಿದಕ್ಕೆ, ಶ್ರೀನಿವಾಸ್‌ರವರು ಹೇಳಿದಕ್ಕೆ, ಕೃಷ್ಣನ್‌ರವರು ಹೇಳಿದಕ್ಕೆ, ವೆಂಕಟರಾಮಯ್ಯನವರು ಹೇಳಿದಕ್ಕೆ, ಮತ್ತು ಯಡಿಯೂರಪ್ಪನವರು ಹೇಳಿದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ, ಇವತ್ತು ತಕರ್, ಆಯೋಗದ ವರದಿಯಿಂದ ದೇಶದ ಭದ್ರತೆಗೆ ಧಕ್ಕೆ ಬಂದಿದೆ...

ಶ್ರೀ ಎಂ. ರಘುಪತಿ.—ಇದನ್ನು ಚರ್ಚೆ ಮಾಡುವುದಕ್ಕಾಗುವುದಿಲ್ಲವೆಂದು ದೇವೇಗೌಡರು ಹೇಳಿದರು' ದರೆ ಇಂತಹ ಅನೇಕ ವಿಷಯಗಳನ್ನು ಇಲ್ಲಿ ಚರ್ಚೆ ಮಾಡಿದ್ದೇವೆ...

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.— ಇಲ್ಲಿ ಬಹಳ ಮುಖ್ಯವಾಗಿರುವುದು ಏನೆಂದರೆ ಇವತ್ತು ಠಕರ್ ಆಯೋಗದಿಂದ ಏನು ವರದಿ ಬಂದಿದೆ, ಅದರ ಪ್ರಕಾರ ಇಡೀ ದೇಶದ ಭದ್ರತೆಗೆ ಧಕ್ಕೆ ಬಂದಿದೆ. ಈ ರೀತಿ ಆದರೆ ಈ ದೇಶ ಉಳಿಯುತ್ತದೆಯೇ, ರಾಷ್ಟ್ರ ಉಳಿಯುತ್ತದೆಯೇ ಎಂಬ ಪ್ರಶ್ನೆ ಬರುತ್ತದೆ. ಈ ಬಗ್ಗೆ ಶ್ರೀಮಾನ್ ಕೆ. ಹೆಚ್. ಶ್ರೀನಿವಾಸ್‌ರವರು ತಮ್ಮ ಅಭಿಪ್ರಾಯವನ್ನು ಹೇಳಿದರು. ಅವರಿಗೆ ಹೇಳುವುದಕ್ಕೆ ಅಧಿಕಾರ ಇದೆ, ಹೇಳಲಿ, ಈ ಬಗ್ಗೆ ನನ್ನದೇನು ಪಾಯಿಂಟ್ ಅಫ್ ಆರ್ಡರ್ ಎಂದರೆ, ಠಕರ್ ಆಯೋಗದ ವರದಿಯ ಪರಿಣಾಮವಾಗಿ ದೇಶದ ಭದ್ರತೆಗೆ ಧಕ್ಕೆ ಬಂದಿರುವ ಸಂದರ್ಭದಲ್ಲಿ ಈ ದೇಶ ಉಳಿದರೆ, ಈ ರಾಜ್ಯವೂ ಉಳಿಯುತ್ತದೆ ಎಂದು ಹೇಳಬೇಕಾಗುತ್ತದೆ. ಇವತ್ತು ಇವರು ದೆಲ್ಲಿಯಲ್ಲಿ ಅವಿವೇಕದ ಕೆಲಸ ಮಾಡಿ ಇಲ್ಲಿ ವಿವೇಕ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದರ ಕಾಪಿ ಸರ್ಕ್ಯುಲೇಟ್ ಮಾಡಿ, ಎಲ್ಲಾ ಮೆಂಬರ್ಸ್‌ಗೆ ಕೊಡಿ, ಅದರ್ ಮೆರಿಟ್, ಡಿಮೆರಿಟ್ ಬಗ್ಗೆ ಅವರು ಹೇಳಲಿ

ಅಧ್ಯಕ್ಷರು.—ಕೆ. ಹೆಚ್. ಶ್ರೀನಿವಾಸ್‌ಗೆ ಅವಕಾಶ ಕೊಟ್ಟಾಗ ಯಾರೂ ಏನು ಹೇಳಲಿಲ್ಲ. ನೀವೇ ಅವಕಾಶ ಕೊಡಿ ಎಂದು ಹೇಳಿದ್ದೀರಿ, ಈಗ ಈ ರೀತಿಹೇಳುತ್ತಿದ್ದೀರಿ...

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಏನು ಅವಕಾಶ ಕೊಡುವುದು ?

(ಗೊಂದಲ)

ಶ್ರೀ ಟಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೇ, ನಾನು ಮಾನ್ಯ ಕೆ. ಹೆಚ್. ಶ್ರೀನಿವಾಸರವರು ಹೇಳಿರತಕ್ಕಂಥ ವಿಚಾರದ ಬಗ್ಗೆ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿರುತ್ತೇನೆ. ಮೂರು ಅಂಶಗಳನ್ನು ತಮ್ಮ ಗಮನಕ್ಕೆ ಹಾಗೂ ಸದನದ ಗಮನಕ್ಕೆ ತರಬಯಸುತ್ತೇನೆ. ತಾವು ಅವಕಾಶ ಕೊಡಬೇಕು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಏನು ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಏನು ಇದೆಲ್ಲಾ, ಈ ರೀತಿ ಆದರೆ ಹೇಗೆ ?...

(ಗೊಂದಲ)

11-00 Noon

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಮಾಡಿರುತ್ತಾರೆ ಎಂದು ನೀವೂ ಮಾಡುತ್ತೀರಾ ?

(ಗೊಂದಲ)

ಅಧ್ಯಕ್ಷರು.—ಶ್ರೀನಿವಾಸ್‌ರವರು ಯಾವ ರೂಲ್ ಪ್ರಕಾರ ಮಾತನಾಡಿದ್ದಾರೆ, ಅದೇ ರೂಲ್ ಪ್ರಕಾರ ಇವರೂ ಮಾತನಾಡುತ್ತಾರೆ. ನಾನು ಅವಕಾಶ ಕೊಟ್ಟಿದ್ದೇನೆ,

(ಗೊಂದಲ)

ಶ್ರೀ ಟಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೇ, ಮೊದಲನೆಯದಾಗಿ ಈ ಸದನದ ಅಧ್ಯಕ್ಷರೆ ವಡವಳಿಕೆ ಬಗ್ಗೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಸರಿಯಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದು ಸರಿಯಲ್ಲ...

(ಗೊಂದಲ)

ಅಧ್ಯಕ್ಷರು.—ಅವರು ಏನು ಹೇಳುತ್ತಾರೆ ಕೇಳೋಣ. ಮೊದಲೇ ನಾನು ರೂಲ್ ೬೮ರ ಪ್ರಕಾರ ಚರ್ಚೆ ಆಗಬೇಕೆಂದು ರೂಲಿಂಗ್ ಕೊಟ್ಟಿದ್ದೇನೆ. ನಾನು ರೂಲಿಂಗ್ ಕೊಟ್ಟಮೇಲೆ ಚೀಫ್ ಮಿನಿಸ್ಟರ್‌ರವರು ಮಾತನಾಡಿದ್ದಾರೆ, ನಂತರ ಮಾನ್ಯ ದೇವೇಗೌಡರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಆದರ ಮೇಲೆ ಶ್ರೀನಿವಾಸ್‌ರವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ರೆಮೇಲೆ ಕೃಷ್ಣನ್‌ರವರು ಮಾತನಾಡಿದರು.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೇ, ನಾನು ಮೆರಿಟ್ಸ್ ಆಫ್ ದಿ ಕೇಸ್ ಬಗ್ಗೆ ಹೋಗುವುದಿಲ್ಲ. ಶ್ರೀನಿವಾಸ್‌ರವರು ಏನು ಮಾತನಾಡಿದ್ದಾರೆ ಎಂದರೆ...

(ಗೊಂದಲ)

ಅಧ್ಯಕ್ಷರು.—ಮಾಯಿಲಿಯಂಪರೇ, ಅವರು ಹೇಳಲಿ. ನಿಮಗೂ ಅವಕಾಶ ಕೊಟ್ಟಿದ್ದೇನೆ. ಶ್ರೀನಿವಾಸ್‌ರವರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಇವರಿಗೂ ಅವಕಾಶ ಕೊಟ್ಟಿದ್ದೇನೆ ಇವರೂ ಮಾತನಾಡಲಿ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆಯೇ ಇದರಲ್ಲಿ ಉದ್ಭವವಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಅವರು ಮಾತನಾಡಲಿ

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ಮಾತನಾಡಲು ಬಯಸತಕ್ಕದ್ದು ಎರಡು ವಿಷಯಗಳ ಮೇಲೆ...

(ಗೊಂದಲ)

ಅಧ್ಯಕ್ಷರು.—ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ. ಇವತ್ತು ನಾಳೆ ನಾಡಿದ್ದು ಮೂರು ದಿವಸ ಸಭೆ ಇದೆ...

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪ್ರಶ್ನೋತ್ತರ ಆಗಲಿ. ಈಗ ಇಲ್ಲಿ ಅವರು ಮಾತನಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಅವರಿಗೆ ಡಿಸ್ಟರ್ಬ್ ಮಾಡಬೇಡಿ. ಶ್ರೀ ಶ್ರೀನಿವಾಸ್‌ರವರು ಮಾತನಾಡುವ ಮುಂದೆ ಯಾರೂ ಏನೂ ಹೇಳಲಿಲ್ಲ. ಈಗ ಅವರನ್ನು ಕರೆದಿದ್ದೇನೆ. ಅವರು ಮಾತನಾಡಲಿ. ಅವರಿಗೆ ಅವಕಾಶ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೇ, ನಾನು ಇನ್ನೂ ಏನೂ ಹೇಳಲೇ ಇಲ್ಲ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಕೊಶ್ಚನ್ ಹವರ್ ಆದಮೇಲೆ ತಗದುಕೊಳ್ಳೋಣ ಎಂದು ನಾನು ಹೇಳಿದೆ. ರೂಲ್ ೬೮ರ ಪ್ರಕಾರ ಚರ್ಚೆ ಮಾಡೋಣ ಎಂದು ಅಧ್ಯಕ್ಷರು ಹೇಳಿದರು. ಆದರ ಬಗ್ಗೆ ಮಾನ್ಯ ದೇವೇಗೌಡರು ಪಾಯಿಂಟ್ ಆಫ್ ಆರ್ಡರ್ ಎತ್ತಿದರು. ಸತ್‌ಸಂಪ್ರದಾಯಗಳ ಬಗ್ಗೆ ಮಾತನಾಡಿದರು. ಅಲ್ಲಿಗೆ ಮುಗಿಸೋಣ ಎಂದು ನಾನು ಹೇಳಿದೆ. ಆದರ ಬಗ್ಗೆ ಮಾನ್ಯ

ಶ್ರೀನಿವಾಸ್‌ರವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದರು. ನಾನು ಬೇಡ ಎಂದು ಹೇಳಿದೆ. ಅವರಿಗೆ ಅವಕಾಶ ಮಾಡಿಕೊಡಬೇಕೆಂದು ನೀವೆಲ್ಲಾ ಹೇಳಿದೀರಿ. ಶ್ರೀನಿವಾಸ್‌ರವರು ತಮ್ಮ ಅಭಿಪ್ರಾಯ ಕೊಟ್ಟಿದ್ದಾರೆ. ಆಮೇಲೆ ಮಾನ್ಯ ಕೃಷ್ಣನ್‌ರವರು ಹೇಳಿದರು. ವೆಂಕಟರಾಮಯ್ಯನವರು ಹೇಳಿದ್ದಾರೆ. ಯಡಿಯೂರಪ್ಪನವರು ಹೇಳಿದ್ದಾರೆ. ಈಗ ಆದರ ಬಗ್ಗೆ ಸಿಂಧ್ಯಾರವರೂ ಒಂದು ಮಾತು ಹೇಳಬೇಕಾಗುತ್ತದೆ. ಅವರು ಏನು ಹೇಳುತ್ತಾರೆ ಹೇಳಲಿ. ಶ್ರೀನಿವಾಸ್‌ರವರ ಅಭಿಪ್ರಾಯ ವ್ಯಕ್ತ ಮಾಡುವುದು ಬೇಡ ಎಂದಾಗ ನೀವು ಮಾಡಲೇ ಬೇಕು ಎಂದು ಹೇಳಿದಿರಿ. ಅದರ ಮೇಲೆ ದೇವೆಗೌಡರ ಪಾಯಿಂಟ್ ಆಫ್ ಆರ್ಡರ್‌ಗೆ ಸಭಾಧ್ಯಕ್ಷರು ಅವಕಾಶ ಮಾಡಿಕೊಟ್ಟರು. ಬೇಡ ಎಂದು ಹೇಳಿದೆ. ಚರ್ಚೆಗೆ ಹೋಗೋಣ ಎಂದು ಹೇಳಿದೆ. ಅದರ ಬಗ್ಗೆ ಶ್ರೀನಿವಾಸ್‌ರವರು ಪಾಯಿಂಟ್ ಆಫ್ ಆರ್ಡರ್ ಎತ್ತಿದರು. ನಾನು ಬೇಡ ಚರ್ಚೆಗೆ ಹೋಗೋಣ ಎಂದೆ, ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಹೇಳಲೇ ಬೇಕೆಂದರು. ಎಲ್ಲರೂ ಹೇಳಿದರು. ತಾವೂ ಹೇಳಿದ್ದೀರಿ. ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದೀರಿ. ಈಗ ಸಿಂಧ್ಯಾರವರು ಹೇಳಲಿ. ಸಿಂಧ್ಯಾರವರು ಹೇಳಿದನೆಂತರ ನಾನು ಹೇಳುತ್ತೇನೆ, ಆಮೇಲೆ ವಿಷಯಕ್ಕೆ ಹೋಗೋಣ. ಶ್ರೀನಿವಾಸ್ ಅವರಿಗೆ ಅವಕಾಶ ಮಾಡಿ ಕೊಡಲೇಬೇಕೆಂದು ನೀವೇ ಹೇಳಿದಿರಿ. ಆಮೇಲೆ ಶ್ರೀ ಕೃಷ್ಣನ್‌ರವರು, ಶ್ರೀ ಯಡಿಯೂರಪ್ಪನವರು ಮಾತನಾಡಿದರು. ಆವರಿಗೆ ಮಾತನಾಡುವುದಕ್ಕೆ ಅಧಿಕಾರ ಇಲ್ಲ. ಶ್ರೀನಿವಾಸ್‌ರವರು ಮಾತನಾಡುವುದು ಬೇಡ ಎಂದರೆ ನೀವು ಕೇಳಲಿಲ್ಲ, ಈಗ ಸಿಂಧ್ಯಾರವರು ಹೇಳುತ್ತಾರೆ. ಆಮೇಲೆ ನಾನು ಹೇಳುತ್ತೇನೆ. ಆಮೇಲೆ ಚರ್ಚೆ ಇಟ್ಟುಕೊಳ್ಳೋಣ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮೊದಲು ನಿಯಮ ೭೯ರ ಮೇಲೆ ಚರ್ಚೆಯಾಗಬೇಕೆಂದು ಎಷ್ಟು ಸಲ ಹೇಳುವುದು. ನಾನು ಎರಡು ಸಲ ಎದ್ದೆ. ಅವರು ಹೇಳಿದ ಮೇಲೆ ಇವರು ಹೇಳಿದರು. ಆಮೇಲೆ ದೇವೇಗೌಡರು ಎದ್ದರು, ಶ್ರೀನಿವಾಸ್‌ರು ಎದ್ದರು. ಆಲ್ಲಿಗೆ ಸಾಕಾಗಿತ್ತು.

(ಗೊಂದಲ)

ಶ್ರೀ ಜಿ. ನಾರಯಣಕುಮಾರ್, —ಎಲ್ಲರಿಗೂ ಅವಕಾಶ ಇದೆ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಿಮ್ಮ ದೊಡ್ಡ ಪುರಾಣ ನನ್ನಗೆ ಗೊತ್ತಿದೆ. ಕುಳಿತು ಕೊಳ್ಳಿರಿ, ಸಾಕು.

(ಗೊಂದಲ)

ಅಧ್ಯಕ್ಷರು.—ಸಿಂಧ್ಯಾರವರದ್ದು ಮುಗಿದ ಕೂಡಲೇ, ಸಭಾನಾಯಕರು ಹೇಳುತ್ತಾರೆ. ಆ ಮೇಲೆ ಚರ್ಚೆ ಶುರು ಮಾಡೋಣ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಎಷ್ಟು ಜನ ಹೇಳುವುದು. ಮೂರು ಜನ ಹೇಳಿದ್ದಾರೆ ಸಾಕು. ಹಾಗೆಯೇ ಸಭಾನಾಯಕರು ಹೇಳಿದ್ದಾರೆ. ತಾವು ರೂಲಿಂಗ್ ಕೊಟ್ಟಾಯಿತು.

ಇನ್ನೆ ಸಿಂಧ್ಯಾರವರು ಏನು ಹೇಳುವುದು, ಪ್ರಕಾಶ್‌ರವರು ಹೇಳುವುದು, ಪಟೇಲರು ಹೇಳುವುದು, ಮುಂದೆ ಕುಳಿತಿರುವವರೆಲ್ಲರೂ ಹೇಳುವುದು. ಈಗಾಗಲೇ ಒಂದು ಘಂಟೆ ಕಾಲ ಆಯಿತು.

ಶ್ರೀ ಜಿ. ನಾರಾಯಣಕುಮಾರ್.—ಹಾಗಿದ್ದರೆ ಅವರಿಗೆ ಮಾತನಾಡುವುದಕ್ಕೆ ಸಕ್ಕು ಇಲ್ಲವೇ?

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಿಮಗೆ ಮಾತನಾಡುವುದಕ್ಕೆ ಯಾರ ಪರ್ಮಿಷನ್ ಬೇಕಾಗಿಲ್ಲ, ಸಭೆಯ ಬಗ್ಗೆ ಗೌರವ ಇಲ್ಲ. ರೂಲ್ಸ್ ಇಲ್ಲ, ಏನೇನೂ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅಧ್ಯಕ್ಷರೇ, ಶ್ರೀಮತಿ ನಾಗರತ್ನಮ್ಮನವರು ಇಪ್ಪತ್ತು ದಿನಗಳ ಕಾಲ ಅಧ್ಯಕ್ಷ ಸ್ಥಾನದಲ್ಲಿ ಕುಳಿತು ಕೆಲಸ ಮಾಡಿದ್ದಾರೆ. ಅವರು ಒಳ್ಳೆಯ ಸತ್ಸಂಪ್ರದಾಯಗಳನ್ನು ಈ

ಸದನದಲ್ಲಿ ಹಾಕಿದ್ದಾರೆ. ಅವರ ಬಗ್ಗೆ ನಮಗೆಲ್ಲರಿಗೂ ಗೌರವ ಇದೆ. ಅವರು ನಮ್ಮ ಬಗ್ಗೆ ಯೂ ಅಭಿಮಾನ ಇಟ್ಟುಕೊಂಡಿದ್ದಾರೆ. ಮೂರು ಅಂಶಗಳನ್ನು ಈ ಸದನದ ಗಮನಕ್ಕೆ ತರುತ್ತೇನೆ, ಎಲ್ಲವನ್ನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಮೊದಲನೆಯದಾಗಿ ಶ್ರೀನಿವಾಸ್‌ರವರು ಮಾತನಾಡತಕ್ಕ ಸಂದರ್ಭದಲ್ಲಿ ಈ ಸಭೆಯ ಅಧ್ಯಕ್ಷರ ಬಗ್ಗೆ ಅಗೌರವ ಉಟಾಗುವ ರೀತಿಯಲ್ಲಿ ಮಾತನಾಡಿದ್ದಾರೆ. ಅವಿವೇಕ ಎನ್ನತಕ್ಕ ಮಾತು ಏನಿದೆ ಅದು ಈ ಸದನಕ್ಕೆ, ನಮ್ಮೆಲ್ಲರಿಗೆ ಹಾಗೂ ಅಧ್ಯಕ್ಷರಿಗೆ ಹಾಗೂ ಅವರ ಸ್ಥಾನಕ್ಕೆ ಗೌರವ ತರತಕ್ಕಂತಹ ಮಾತು ಅಲ್ಲ. ಅದು ಕಡತದಲ್ಲಿ ಹೋಗ ಬಾರದು, ಇದು ಮೊದಲನೆಯ ಅಂಶ. ಇನ್ನು ಎರಡನೇ ವಿಷಯ ಎಂದರೆ ಈ ಸಭೆ ಶಾಂತವಾಗಿ ನಡೆಯ ಬೇಕೆನ್ನುವುದಾದಲ್ಲಿ ಎಂದು ಏನು ಹೇಳಿದ್ದಾರೆ. ಅದು ಒಂದು ರೀತಿ ಥ್ರೆಟ್. ಅದಂ ನಮಗೆ ಬೆದರಿಕೆ ಕೊಟ್ಟಹಾಗೆ ಆಗುತ್ತದೆ. ಪೀಸ್‌ಫುಲ್ ಆಗಿ ಎಂದರೆ ಅಹಿಂಸೆಯಿಂದ ನಡೆಯ ಬೇಕೆಂದು ಅರ್ಥ. ಈಗ ನಾವೇನು ನಿಮಗೆ ಹಿಂಸೆ ಮಾಡುತ್ತಾ ಇದ್ದೀವೆ ಎಂದು ಅರ್ಥವೇ? ಏನು ಇದರ ಅರ್ಥ. ದಯವಿಟ್ಟು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು, ತಮ್ಮ ಬಗ್ಗೆ ನಮಗೆ ಅಭಿಮಾನ ಇದೆ. ಗೌರವ ಇದೆ. ರೂಲ್ಸ್ ಪ್ರಕಾರ ನಾವು ನಡೆದುಕೊಳ್ಳುತ್ತೇವೆ. ಅಡ್‌ಜರ್ನ್‌ಮೆಂಟ್ ಮೋಷನ್‌ಗೆ ಅವಕಾಶ ಕೊಡಬೇಕೆಂದು ಮಾನ್ಯ ರಘುಪತಿಯವರು ಹಾಗೂ ಇತರ ಹಿರಿಯ ಸದಸ್ಯರು ಏನು ಮೋಷನ್ ಮೂವ್ ಮಾಡಿದ್ದಾರೆ. ಅದರ ಬಗ್ಗೆ ತಾವು ತೀರ್ಪನ್ನು ಕೊಡಬೇಕು. ಅದಕ್ಕೆ ಅವಕಾಶ ಕೊಡಬೇಕೇ ಬಿಡಬೇಕೇ ಎನ್ನುವುದನ್ನು ಕೊಶ್ಚನ್ ಹವರ್ ಆದಮೇಲೆ ಏನು ಮಾಡಬೇಕೆಂದು ನೀವು ತೀರ್ಪನ್ನು ಕೊಡುವವರಿದ್ದೀರಿ. ನಾವೆಲ್ಲಾ ತಮ್ಮ ತೀರ್ಪಿನ ಬಗ್ಗೆ ಬಹಳ ಗೌರವದಿಂದ ನಡೆದು ಕೊಳ್ಳುತ್ತೇವೆ. ತಾವು ಏನು ತೀರ್ಪು ಕೊಡುತ್ತೀರೋ ಕೊಡಿ. ನಾನು ಏನು ಹೇಳುವುದು ಎಂದರೆ ಶ್ರೀ ನಿವಾಸ್‌ರವರೇ ಆಗಲಿ, ಇತರ ಯಾರೇ ಸದಸ್ಯರಾಗಲೀ ತಮಗೆ ಬೆದರಿಕೆ ಹಾಕುವುದಕ್ಕೆ ಆಗುವುದಿಲ್ಲ. ಸಭೆ ಪೀಸ್‌ಫುಲ್ ಆಗಿ ನಡೆಯಬೇಕು, ಹಾಗೇ ಆಗಬೇಕು, ಹೀಗೇ ಆಗಬೇಕು ಎಂದು ಹೇಳುವುದಕ್ಕೆ ಆಗುವುದಿಲ್ಲ. ಕೊನೆಯದಾಗಿ ಈ ವಿಷಯ ಇವತ್ತು ಏತಕ್ಕೆ ಇಲ್ಲಿ ಚರ್ಚೆ ಆಗಬೇಕು ಎಂದರೆ, ಈ ದೇಶದಲ್ಲಿ ಮುಖ್ಯವಾಗಿರತಕ್ಕಂಥ ಪ್ರಧಾನ ಮಂತ್ರಿಯವರ ಕಚೇರಿಯಲ್ಲಿರತಕ್ಕಂಥ ಜನಗಳ ಬಗ್ಗೆ ಕೆಲವು ಆಪಾದನೆಗಳಿವೆ. ಇದರ ಬಗ್ಗೆ ಚರ್ಚೆ ಆಗಬೇಕೆಂದು ನಾನು ಹೇಳುತ್ತೇನೆ. ಇದನ್ನು ತಾವು ದಯವಿಟ್ಟು ಗಮನದಲ್ಲಿ ಇಟ್ಟುಕೊಳ್ಳಬೇಕು. ಆದುದರಿಂದ ಇದನ್ನು ನಾವು ಸಬ್‌ಮಿಟ್ ಮಾಡಿರುತ್ತೇವೆಯೇ ಹೊರತು ಇನ್ನು ಯಾವ ದೃಷ್ಟಿಯಿಂದಲೂ ಅಲ್ಲ. ಈ ಬಗ್ಗೆ ತಾವೇನು ತೀರ್ಮಾನ ಕೊಡುತ್ತೀರಿ ಅದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನಾನು ಎರಡು ವಿಷಯಗಳ ಬಗ್ಗೆ ಸ್ಪಷ್ಟೀಕರಣ ಕೊಡಬೇಕು, ನಿಮ್ಮನ್ನು ಕುರಿತು ನಾನು ಅವಿವೇಕ ಎಂದು ಹೇಳಲಿಲ್ಲ. ಇಂತಹ ವಿಚಾರಗಳನ್ನು ಇಲ್ಲಿ ಚರ್ಚೆ ಮಾಡಿದರೆ ಅದು ಅವಿವೇಕವಾಗುತ್ತದೆ ಎಂದು ಹೇಳಿದ್ದೇನೆಯೇ ಹೊರತು ನೀವು ಅವಿವೇಕಿಗಳು ಅವರು ಅವಿವೇಕಿಗಳು, ಇವರು ಅವಿವೇಕಿಗಳು ಎಂದು ಹೇಳಲಿಲ್ಲ. ಯಾರನ್ನೂ ಅವಿವೇಕಿಗಳು ಎಂದು ನಾನು ಹೇಳಲಿಲ್ಲ. ಈ ವಿಷಯಗಳನ್ನು ಈ ಸದನದಲ್ಲಿ ಚರ್ಚೆ ಮಾಡುತ್ತಾ ಹೋದರೆ ಅದು ಅವಿವೇಕವಾಗುತ್ತದೆ ಎಂದು ಹೇಳಿದೆ. ಕೆಲವರಿಗೆ ಇಂಗ್ಲೀಷ್ ಗೊತ್ತಾಗದಿದ್ದರೆ ಕನ್ನಡದಲ್ಲಿ ತಿಳಿದುಕೊಳ್ಳಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ.—ನಿಮ್ಮ ಮಕ್ಕಳನ್ನು ಇಂಗ್ಲೀಷ್ ಮಿಡಿಯಂ ಸ್ಕೂಲ್‌ಗೆ ಕಳುಹಿಸುತ್ತೀರೆಂದು ನನಗೆ ಗೊತ್ತು. ನಾನು ನಿಮ್ಮಿಂದ ಇಂಗ್ಲಿಷ್ ತಿಳಿದುಕೊಳ್ಳಬೇಕಾಗಿಲ್ಲ.

(ಗೊಂದಲ)

ಶ್ರೀ ಕೆ.ಹೆಚ್. ಶ್ರೀನಿವಾಸ್.—ಆಮೇಲೆ ಈ ರೀತಿ ವಿಷಯಗಳನ್ನು ಇಲ್ಲಿ ಅಲೋ ಮಾಡುತ್ತಾ ಹೋದರೆ ಎಲ್ಲ ವಿಷಯಗಳೂ ಇಲ್ಲಿ ಬರುತ್ತವೆ, ಈ ಸದನದ ಕಾರ್ಯನಿರ್ವಹಣೆ ಶಾಂತವಾಗಿ ನಡೆಯುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದೇನೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ,.....

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ದೇವೇಗೌಡರು ಒಂದು ಪಾಯಿಂಟ್ ಆಫ್ ಆರ್ಡರ್‌ನ್ನು ಎತ್ತಿ ತಕ್ಕರ್ ಆಯೋಗದ ವರದಿ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಆದರೆ ಈ ದೇಶದ ಭದ್ರತೆಯ ವಿಷಯಗಳು ಬಂದಾಗ ಈ ಸದನದಲ್ಲಿ ಚರ್ಚೆ ಮಾಡಿರುವ ಉದಾಹರಣೆಗಳು ಇಲ್ಲಿ ಇವೆ. ಚೈನಾ ದೇಶದವರು ಒಂದು ಸಾರಿ ನಮ್ಮ ದೇಶದ ಮೇಲೆ ದುರಾಕ್ರಮಣ ಮಾಡಿದಾಗ ಚರ್ಚೆ ಮಾಡಿದ್ದೇವೆ. ಪಾಕಿಸ್ತಾನದವರು ನಮ್ಮ ದೇಶದ ಮೇಲೆ ದುರಾಕ್ರಮಣ ಮಾಡಿದಾಗ ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಇವತ್ತು ಮಾನ್ಯ ದೇವೇಗೌಡರು ಕಾಂಗ್ರೆಸ್ ಪಕ್ಷ ವಹಿಸಿ ಮಾತನಾಡುತ್ತಾರೆಂದು ನಾನು ತಿಳಿದುಕೊಂಡಿರಲಿಲ್ಲ. ಅಧ್ಯಕ್ಷರೇ, ನಾನು ಇವತ್ತು ಮನವಿ ಮಾಡಿಕೊಳ್ಳುವುದಿಷ್ಟೇ, ಇದು ನಮ್ಮ ರಾಷ್ಟ್ರದ ವಿಷಯವಲ್ಲದೆ ನಮ್ಮ ದೇಶದ ಪ್ರಧಾನಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರನ್ನು ಯಾರು ಕೊಲೆ ಮಾಡಿಸಿದ್ದಾರೋ, ಅದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕು. ಆ ವಿಷಯವನ್ನು ಎಲ್ಲರೂ ತಿಳಿದುಕೊಳ್ಳಬೇಕು. ಆದ್ದರಿಂದ ಈ ವಿಷಯದ ಮೇಲೆ ಚರ್ಚೆಯಾಗಲೇಬೇಕು. ಚರ್ಚೆ ಮಾಡುವುದಕ್ಕೆ ಈ ಸದನದಲ್ಲಿ ತಾವು ಅವಕಾಶ ಮಾಡಿಕೊಡಬೇಕು.

(ಗೊಂದಲ)

ಶ್ರೀ ವೇದಾಂತ ಹೆಬ್ಬಾಗಿ.—ಮಾನ್ಯ ದೇವೇಗೌಡರು ಈ ಸದನವನ್ನು ಉದ್ದೇಶಿಸಿ ಈ ರೀತಿ ಹೇಳಿದ್ದಾರೆ. The observations made on Takkar Commission report is reported in newspapers. There is no necessity.....

(Interruption)

ಶ್ರೀ ವೈ.ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ. ಈ ಸದನದಲ್ಲಿ ಯಾವುದು ಚರ್ಚೆಯಾಗಬೇಕು ಯಾವುದು ಚರ್ಚೆ ಆಗಬಾರದೆಂಬ ತೀರ್ಮಾನ ಮಾಡುವುದಕ್ಕಾಗಿಯೇ ನಿಮ್ಮನ್ನು ಉನ್ನತವಾದ ಪೀಠದಲ್ಲಿ ಕೂರಿಸಿರುವುದು. ಬರೀ ಅಲಂಕಾರಕ್ಕಾಗಿಯಲ್ಲ. ಈ ಸದನದಲ್ಲಿ ನಡೆಯುವ ಕಾರ್ಯಕಲಾಪಗಳನ್ನು ಸರಿಯಾಗಿ ನಡೆಸುವುದಕ್ಕೆ, ನಿಯಂತ್ರಣ ಮಾಡಲಿಕ್ಕೆ ಮತ್ತು ತಹಬಂದಿಗೆ ತರಲಿಕ್ಕೆ ನಿಮಗೆ ಸರ್ವ ಸ್ವಾತಂತ್ರ್ಯ ಇದೆ. ಆ ಸ್ವಾತಂತ್ರ್ಯವನ್ನು ಚಲಾಯಿಸುವಾಗ ಕಾನೂನಿನ ಚೌಕಟ್ಟಿನಲ್ಲಿ ನಿಯಮಾವಳಿಗಳ ಚೌಕಟ್ಟಿನಲ್ಲಿ ಮಾಡಬೇಕಾಗುತ್ತದೆ. ಈ ಸದನದಲ್ಲಿ ಯಾವುದನ್ನು ಚರ್ಚೆ ಮಾಡಬೇಕು, ಯಾವುದನ್ನು ಚರ್ಚೆ ಮಾಡಬಾರದು ಎಂಬ ಬಗ್ಗೆ, ಹಾಗೂ ಅಜೆಂಡಾದಲ್ಲಿ ಇರುವಂತೆ ಕಾರ್ಯಕ್ರಮಗಳನ್ನು ನಡೆಸಬೇಕೋ ಅಥವಾ ಮಾನ್ಯ ಮಿತ್ರರಾದಂಥ ರಘುಪತಿಯವರು ಹೇಳಿದ ಅಡ್ಜರ್ನ್‌ಮೆಂಟ್ ಮೋಷನ್‌ನ್ನು ತೆಗೆದುಕೊಳ್ಳಬೇಕೋ ಎನ್ನುವ ಬಗ್ಗೆ ತೀರ್ಮಾನವನ್ನು ನೀವು ಕೊಡಬೇಕಾಗುತ್ತದೆ. ಎರಡನೆಯ ವಿಷಯ ಎಂದರೆ, ತಕ್ಕರ್ ಕಮಿಷನ್ ರಿಪೋರ್ಟ್ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಇದೆಯೇ ಇಲ್ಲವೇ ಎನ್ನುವ ಬಗ್ಗೆ ನನ್ನ ಪ್ರಕಾರ ಹೇಳಬೇಕೆಂದರೆ ಅದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ನನ್ನ ಅಭಿಪ್ರಾಯ ಏನೆಂಬುದನ್ನು ಹೇಳುತ್ತೇನೆ. That was a Commission appointed by the Central Government and it is only the Parliament which is entitled to discuss and take action. ನಿಮ್ಮ ಪ್ರಕಾರ ಇದು ಚರ್ಚೆ ಮಾಡುವುದಕ್ಕಾಗುತ್ತದೆಂದು ಅಭಿಪ್ರಾಯ ಪಡುವುದಾದರೆ ಅದಕ್ಕೆ ನನ್ನ ಆಡ್ಡಿ ಇಲ್ಲ. ಯಾವುದಾದರೂ ಒಂದು ವಿಷಯವನ್ನು ಪ್ರಸ್ತಾಪ ಮಾಡಿದಾಗ ಅದು ಸರಿಯೇ ತಪ್ಪೇ ಎಂದು ನೋಡಬೇಕಾಗುತ್ತದೆ.

ಅಧ್ಯಕ್ಷರು.—ಇನ್ನು ಸಾಕು ತಾವು ಕುಳಿತುಕೊಳ್ಳಿ.

ಶ್ರೀ ವೈ.ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ.

(ಗೊಂದಲ)

ಶ್ರೀ ವೈ.ಕೆ. ರಾಮಯ್ಯ.—ಬೇರೆ ಸದಸ್ಯರುಗಳು ಮಾತನಾಡುವಾಗ ನಾನು ಬಾಯಿ ಮುಚ್ಚಿಕೊಂಡು ಸುಮ್ಮನೆ ಕುಳಿತುಕೊಂಡಿರುತ್ತೇನೆ. ನಾನು ಮಾತನಾಡುವಾಗ ಬೇರೆ ಯಾರಾದರು ಬಾಯಿ ಬಿಚ್ಚಿದರೆ ನಾನು ಸುಮ್ಮನಿರುವುದಿಲ್ಲ. ಬೇರೆಯವರು ಮಾತನಾಡುವಾಗ ನಾನು ಸುಮ್ಮನೆ ಕುಳಿತಿರುವುದಿಲ್ಲವೇ?

ಅಧ್ಯಕ್ಷರು. ನಾನು ಈಗ ಯಾರಿಗೂ ಅಲೋ ಮಾಡುವುದಿಲ್ಲ.

ಶ್ರೀ ವೈ.ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಈಗ ಸಾಕು. ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ ಎಂದು ಹೇಳಿದ್ದೀರಿ. ನಿಮ್ಮ ಇಂಗಿತವನ್ನು ನಾನು ತಿಳಿದುಕೊಂಡಿದ್ದೇನೆ. ಈಗ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವೈ.ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ. ನನ್ನನ್ನು ಆಗಲೇ ಕರೆದಿದ್ದೀರಿ. ನನಗೆ ಮಾತನಾಡುವುದಕ್ಕೆ ಆಗಲೇ ಅವಕಾಶ ಕೊಟ್ಟಿದ್ದೀರಿ.

ಅಧ್ಯಕ್ಷರು.—ಚರ್ಚೆಗೆ ಅವಕಾಶ ಕೊಡಬಾರದೆಂದು ತಾವು ಹೇಳಿದ್ದೀರಿ.

ಶ್ರೀ ವೈ. ಕೆ. ರಾಮಯ್ಯ.—ನಾನು ಪೂರ್ತಿ ಹೇಳುವುದನ್ನು ತಾವು ಕೇಳಬೇಕು.

ಅಧ್ಯಕ್ಷರು.—ಈಗ ತಾವು ಹೇಳಿರುವುದು ಸಾಕು.

ಶ್ರೀ ವೈ. ಕೆ. ರಾಮಯ್ಯ.—ನಾನು ಪೂರ್ತಿ ಹೇಳುವುದಕ್ಕೆ ತಾವು ಬಿಟ್ಟಿಲ್ಲ. ಮಾನ್ಯ ಸದಸ್ಯರಾದ ರಘುಪತಿಯವರು ಆವಾಗಲೇ ಮಾತನಾಡುತ್ತಾ, ಮಾನ್ಯ ದೇವೇಗೌಡರು ಕಾಂಗ್ರೆಸ್ ಪಕ್ಷದ ಪರವಾಗಿ ವಾದಿಸುತ್ತಾರೆಂದು ನಾನು ನಿರೀಕ್ಷಣೆ ಮಾಡಿರಲಿಲ್ಲವೆಂದು ಹೇಳಿದ್ದಾರೆ. ಕಾಂಗ್ರೆಸ್ ಪಕ್ಷದವರು ಇಲ್ಲಿ ಒಳ್ಳೆಯ ಮಾತನ್ನು ಆಡಿದಾಗ ಅದರ ಬಗ್ಗೆ ಹೇಳಲೇಬೇಕಾಗುತ್ತದೆ. ಕಾಂಗ್ರೆಸ್ ಪಕ್ಷದವರು ಅಥವಾ ಕಮ್ಯೂನಿಸ್ಟ್ ಪಕ್ಷದವರು ಅಥವಾ ಯಾರೇ ಆದರೂ ಒಂದು ಒಳ್ಳೆಯ ಮಾತಾಡಿದಾಗ, ಯಾವುದೇ ಒಂದು ಒಳ್ಳೆಯ ವಿಷಯವನ್ನು ಹೇಳಿದಾಗ ನಾವು ಅವರ ಪರವಾಗಿ ಮಾತನಾಡಿದರೆ ಅವರ ಪರವಾಗಿ ನಾವು ಇದ್ದೇವೆ ಎಂದು ಅರ್ಥವಲ್ಲ. ಮಾನ್ಯ ಶ್ರೀನಿವಾಸ್‌ರವರು ಮಾತನಾಡಿದ ಕಾನೂನಿನ ಆಧಾರದ ಮೇಲೆ ಖಂಡ್ಯ ಅವರಿಗೆ ಮಾತನಾಡಲು ನೀವು ಅವಕಾಶ ಮಾಡಿಕೊಟ್ಟಿದ್ದೀರಿ. ಠಕ್ಕರ್ ಕಮಿಷನ್ ರಿಪೋರ್ಟ್ ವಿಚಾರದಲ್ಲಿ ಚರ್ಚೆ ಮಾಡಬೇಕೇ ಬೇಡವೇ ಎಂಬ ವಿಷಯ ಬಂದಾಗ ಅದು ಕಾನೂನಿನ ಚೌಕಟ್ಟಿನಲ್ಲಿ ಏನಾಗುತ್ತದೆ ಅಂದರೆ.....

ಅಧ್ಯಕ್ಷರು.—ದಯವಿಟ್ಟು ತಾವು ಏನಾಗಬೇಕೆಂದು ಹೇಳಿ.....

ಶ್ರೀ ವೈ. ಕೆ. ರಾಮಯ್ಯ.—ಈಗ ಅಜೆಂಡಾ ನಮ್ಮ ಮುಂದೆ ಇದೆ. ದಯವಿಟ್ಟು ಅಜೆಂಡಾ ಪ್ರಕಾರವೇ ನೀವು ಸದನವನ್ನು ನಡೆಸಿಕೊಂಡು ಹೋಗಬೇಕು. ಬೇರೆ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಕೂಡದು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ನಾನು ಒಂದು ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಈ ಬಗ್ಗೆ ಯಾರೂ ಅನ್ಯಥಾ ಭಾವನೆ ಮಾಡಿಕೊಳ್ಳಬೇಕಾಗಿಲ್ಲ. ಇಲ್ಲಿ ನಾನು ಯಾರ ಪರವಾಗಿಯೂ ವಕೀಲಿ ಮಾಡುವುದಕ್ಕೆ ಬಂದಿಲ್ಲ. ನಾನು ಅಲ್ಲಿ ಕುಳಿತಾಗಲೂ ಕೂಡ ನನಗೆ ತಿಳಿದಂಥ ವಿಷಯಗಳನ್ನು ನೇರವಾಗಿ ಹೇಳಿದ್ದೇನೆ. ಸಿ. ಬಿ. ಡಿ. ರಿಪೋರ್ಟ್‌ನ್ನು ಈ ಸಭೆಯಲ್ಲಿ ಇಡುವುದಕ್ಕೆ ಆಗುವುದಿಲ್ಲ ಎಂದು ಅಲ್ಲಿ ಕುಳಿತಿದ್ದಾಗಲೂ ಹೇಳಿದ್ದೇನೆ. ಇವೊತ್ತು ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿದೆ ಎಂದು ಹಾಗೂ ಆದು ಅಡ್ಜರ್ನ್‌ಮೆಂಟ್ ಮೋಷನ್, ವ್ಯಾಪ್ತಿಯಲ್ಲಿ ಚರ್ಚೆಯಾಗಬೇಕೆಂಬ ಬೇಡಿಕೆ ಬಂದಾಗ ನಾನು ನನ್ನ ಅನುಭವದಲ್ಲಿ, ಈ ಸದನದ ಕಾರ್ಯಕಲಾಪಗಳನ್ನು ಹೇಗೆ ಯಾವ ರೀತಿಯಲ್ಲಿ ನಡೆಸಿಕೊಂಡುಹೋಗಬೇಕೆಂದು ತಿಳಿದುಕೊಂಡ ಹಿನ್ನೆಲೆಯಲ್ಲಿ ನಾನು ಹೇಳಿದ್ದೇನೆ. ನಾನು ಇಲ್ಲಿ ಯಾರ ಪರವಾಗಿಯೂ ವಕೀಲಿ ಮಾಡಬೇಕಾದ ಅವಶ್ಯಕತೆ ಇಲ್ಲ. ನನಗೆ ಸ್ವಂತ ಶಕ್ತಿ ಇದ್ದರೆ ನಿಲ್ಲುತ್ತೇನೆ ಇಲ್ಲದೇ ಹೋದಲ್ಲಿ ಹೋಗುತ್ತೇನೆ. ತಾವುಗಳು ಈ ಸದನದಲ್ಲಿ ಕುಳಿತು ನಮಗೆ ಮಾರ್ಗದರ್ಶನ ಮಾಡತಕ್ಕಂಥ ಕಾಲದಲ್ಲಿ ಈ ಅಡ್ಜರ್ನ್‌ಮೆಂಟ್ ಮೋಷನ್‌ನನ್ನು ತಳ್ಳಿ ಹಾಕಿ, "It will not come under the purview of the adjournment motion" ಎಂದು ಆದನ್ನು ಕಳುಹಿಸಿದವರಿಗೆ ಉತ್ತರವನ್ನು ಕಳುಹಿಸಿ ಕೊಡುತ್ತೀರಿ. ಯಾವುದೇ ಒಂದು ವಿಚಾರ ಅಡ್ಜರ್ನ್‌ಮೆಂಟ್ ಮೋಷನ್ ವ್ಯಾಪ್ತಿಯಲ್ಲಿ ಬರುತ್ತದೆಯೇ ಅಥವಾ ಇಲ್ಲವೇ ಎಂದು ಹೇಳತಕ್ಕಂಥಾದ್ದು ನಿಮಗೆ ಸೇರಿರತಕ್ಕಂಥ ವಿಷಯವಾಗಿದೆ. ಇದಕ್ಕೆ ಅವಕಾಶ ಕೊಡುವುದು ಅಥವಾ ಬಿಡುವುದು ಕೂಡ ನಿಮಗೆ ಸೇರಿದ ವಿಚಾರವಾಗಿದೆ, ಒಂದು ಕಡೆ ಫೈರಿಂಗ್ ಆಗಿರುತ್ತದೆ, ಆದಕ್ಕೆ ಇಲ್ಲಿ ಚರ್ಚೆಗೆ ಅವಕಾಶ ಕೊಡಬೇಕೇ ಬೇಡವೇ ಎಂಬ ವಿಚಾರದಲ್ಲಿ ಮತ್ತು ಪಬ್ಲಿಕ್ ಇಂಟ್ರೆಸ್ಟ್ ಇದ್ದಲ್ಲಿ ಅದನ್ನು ಹೇಗೆ ತರಬೇಕೆಂದು ಆರ್‌ಗ್ಯೂಮೆಂಟ್

ಮಾಡುವುದಕ್ಕೆ ನಮಗೂ ಬರುತ್ತದೆ. ಅದು ಬೇರೆ ವಿಚಾರ. ಈ ದೇಶದಲ್ಲಿ ಯಾವುದೋ ಒಂದು ಕಮಿಷನ್ ನೇಮಕ ಮಾಡಿ ವರದಿಯನ್ನು ಸಬ್‌ಮಿಟ್ ಮಾಡಿದ್ದರೆ ಅದರ ಬಗ್ಗೆ ಈ ಸದನವ ವ್ಯಾಪ್ತಿಯಲ್ಲಿ ಚರ್ಚೆ ಮಾಡುವುದಕ್ಕೆ ಬರುತ್ತದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ತಾವುಗಳು ದಯವಿಟ್ಟು ನಮಗೆ ಮಾರ್ಗದರ್ಶನ ಮಾಡಬೇಕು. ಅದಕ್ಕಾಗಿ ನಾನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೇನೆಯೇ ಹೊರತು ಬೇರೆ ಉದ್ದೇಶದಿಂದ ಅಲ್ಲ. ಹಾಗೆಯೇ ಇಂಥ ವಿಷಯಗಳು ಚಿಕ್ಕದು ಎಂದು ಯಾರೂ ಹೇಳುವುದಿಲ್ಲ. ಯಾವುದೇ ವಿಷಯದ ಮೇಲೆ ನಾವು ಸಾರ್ವಜನಿಕ ವೇದಿಕೆಗಳಲ್ಲಿ ಭಾಷಣ ಮಾಡುತ್ತೇವೆ. ಕಾಂಗ್ರೆಸ್‌ನವರು ಅಥವಾ ಮತ್ತೊಬ್ಬರು ಏನು ಮಾಡಿದ್ದಾರೆ ಎನ್ನುವ ಬಗ್ಗೆ ಸಾರ್ವಜನಿಕ ವೇದಿಕೆಗಳಲ್ಲಿ ಮಾತನಾಡೋಣ. ಆದರೆ ಈ ಸದನದಲ್ಲಿ ಕಮೀಷನ್ ಆಫ್ ಎನ್‌ಕ್ವೈರಿ ಆಕ್ಟ್ ಕೆಳಗಡೆ ಗವರ್ನ್‌ಮೆಂಟ್ ಆಫ್ ಇಂಡಿಯಾದವರು ನೇಮಕ ಮಾಡಿದ ಕಮಿಷನ್‌ನ ವರದಿಯು ಸಬ್‌ಮಿಟ್ ಆದಾಗ ನಾವುಗಳು ಇಲ್ಲಿ ಆ ಕುರಿತು ಚರ್ಚೆ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬ ಬಗ್ಗೆ ನಾನು ಕ್ರಿಯಾಲೋಪ ಎತ್ತಿದ್ದೇನೆ. ಯಾರಾದರೂ ಸೊಸೈಟಿಗಳನ್ನು ಮಾಡಿಕೊಂಡು ನಾಲ್ಕು ಕಾಸು ಮಾಡಿಕೊಂಡರೆ ಅವ್ಯವಹಾರ ನಡೆದಿದ್ದರೆ ಆ ಬಗ್ಗೆಯೂ ಚರ್ಚೆಗೆ ಅವಕಾಶ ಮಾಡಿಕೊಡಿ, ನಿಧಾನವಾಗಿ ಚರ್ಚೆ ಮಾಡೋಣ. ಈಗ ತಾವು ರೂಲಿಂಗ್ ಕೊಟ್ಟುಬಿಡಿ .....

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ತಾವು ಆಗಲೇ ನಿರ್ಣಯವನ್ನು ಕೊಟ್ಟಿದ್ದೀರಿ. ಏನೆಂದರೆ, ಕೃಷ್ಣಜನ್ ಅವರ ಮೊಗದೆಮೇಲೆ, ಮಾನ್ಯ ಕೃಷ್ಣನ್‌ರವರು ಮತ್ತು ಬೇರೆ ಮಾನ್ಯ ಸದಸ್ಯರುಗಳು ಎತ್ತಿರುವಂಥ ವಿಚಾರಗಳ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡಲಿ ಎಂದು, ಮಾನ್ಯ ದೇವೇಗೌಡರು ತಮ್ಮ ಅನುಭವದಿಂದ ತಮ್ಮ ವಿಚಾರಗಳನ್ನು ಹೇಳಿದ್ದಾರೆ. ಠಕ್ಕರ್ ಕಮಿಶನ್ ರಿಪೋರ್ಟ್ ಬಗ್ಗೆ ಇಲ್ಲಿ ಚರ್ಚೆ ಮಾಡಬೇಕಾಗಿಲ್ಲವೆಂದು ಹೇಳಿದ್ದಾರೆ. ಚರ್ಚೆ ಮಾಡತಕ್ಕಂಥ ವಿಚಾರಗಳು ಬೇರೆ ಇವೆ ಎಂಬ ಬಗ್ಗೆ ನಾನು ಈಗ ಹೇಳುವುದಿಲ್ಲ, ಆ ಬಗ್ಗೆ ಪ್ರಿಲಿಮನರಿ ಸಬ್‌ಮಿಶನ್ ಮಾಡಲು ಅವಕಾಶ ಕೊಟ್ಟರೆ ನನ್ನ ವಿಚಾರಗಳನ್ನು ಹೇಳುತ್ತೇನೆ. ಈ ಮನೆಗೆ, ಈ ಸದನಕ್ಕೆ ನಮ್ಮ ರಾಷ್ಟ್ರಕ್ಕೆ ಸಂಬಂಧಪಟ್ಟಂಥ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಇದೆಯೋ, ಇಲ್ಲವೋ ಎನ್ನುವ ಬಗ್ಗೆ ನಾನು ಆಗ ವಾದ ಮಾಡುತ್ತೇನೆ. ಮಾನ್ಯ ದೇವೇಗೌಡರು ಆಗ ವಾದ ಮಾಡಲಿ. ಈಗ ಆ ವಿಚಾರ ಬೇಡ. ರೂಲ್ಸ್ ಒಳ ರಲ್ಲಿ ಕಳುಹಿಸಿರತಕ್ಕಂಥ ಠಕ್ಕರ್ ರಿಪೋರ್ಟ್, ಅಥವಾ ಕೊಲೆ ಬಗ್ಗೆ ಬಂದಂಥ ವರದಿ, ಅಥವಾ ಕೊಲೆ ಬಗ್ಗೆ ಚರ್ಚೆ ಮಾಡತಕ್ಕಂಥಾದ್ದು ಈ ಗ ಬೇಡ ಎಂದು ನನ್ನ ಅಭಿಪ್ರಾಯ. ಸಬ್‌ಮಿಶನ್ ಮಾಡುವ ಸಂದರ್ಭದಲ್ಲಿ ಮಾನ್ಯ ದೇವೇಗೌಡರು ತಮ್ಮ ವಿಚಾರ ಗಳನ್ನು ಹೇಳಲಿ, ಮಿತ್ರತರರೂ ಹೇಳಲಿ, ನಾವೂ ಹೇಳೋಣ ಆದುದರಿಂದ ಈ ವಿಷಯವನ್ನು ಈಗ ಇಲ್ಲಿಗೇ ಮುಕ್ತಾಯ ಮಾಡೋಣ ಎಂದು ಕೇಳುಕೊಳ್ಳುತ್ತೇನೆ. ಈಗ ನಿಯಮ ೬೮ರ ಕೆಳಗಡೆ ಸೊಸೈಟಿಗಳ ಬಗ್ಗೆ ಚರ್ಚೆ ಮಾಡತಕ್ಕಂಥ ವಿಚಾರ ಇದೆ. ಈ ಕುರಿತು ನಾನು ಒಂದು ತೀರ್ಮಾನಕ್ಕೆ ಬಂದಿದ್ದೇನೆ. ಆ ತೀರ್ಮಾನವನ್ನು ಸಭೆಗೆ ತಿಳಿಸಬೇಕಾಗುತ್ತದೆ ಈ ೧೨೮ ಸೊಸೈಟಿಗಳಲ್ಲಿ ಹೆಚ್ಚಿನ ಸೊಸೈಟಿಗಳು ಸುಮಾರು ೧೦–೨೦ ವರ್ಷಗಳ ಹಿಂದೆ ರಿಜಿಸ್ಟರ್ಡ್ ಆಗಿವೆ. ಈ ಸೊಸೈಟಿಗಳ ಬಗ್ಗೆ ಹಿಂದಿನ ಸರಕಾರದವರು ಕೆಲವು ಆಜ್ಞೆಗಳನ್ನು ಮಾಡಿದ್ದಾರೆ, ಈ ಸರಕಾರವು ಕೂಡ ಕೆಲವು ಆಜ್ಞೆಗಳನ್ನು ಮಾಡಿದೆ. ಇವುಗಳ ಆಡಳಿತ ಸರಿಯಾಗಿ ನಡೆದಿಲ್ಲ ಎಂದು ಗೊತ್ತಾದಮೇಲೆ. ನಿಯಮ ಪ್ರಕಾರವೇ ಇದರ ವಿಚಾರಣೆಯೂ ಆಗಿದೆ. ತನಿಖೆ ಆದಮೇಲೆ ಮಧ್ಯಂತರ ರಿಪೋರ್ಟ್ ಬಂದಿದೆ, ಫೈನಲ್ ರಿಪೋರ್ಟ್ ಕೂಡ ಬಂದಿದೆ. ಅದು ಸರಕಾರಕ್ಕೆ ಒಂದು ವಾರದ ಹಿಂದೆ ಬಂದಿದೆ. ಇದು ಬಂದ ಮೇಲೆ ಕಾನೂನು ಪ್ರಕಾರ ರೂಲ್ಸ್ ಒಳರಲ್ಲಿ ಏನು ಇದೆ ಅದರ ಪ್ರಕಾರವೇ ಕ್ರಮ ತೆಗೆದುಕೊಂಡಿದ್ದೇವೆ. ಆ ವಿವರಗಳಿಗೆ ನಾನು ಈಗ ಹೋಗುವುದಿಲ್ಲ. ಆ ಎರಡೂ ರಿಪೋರ್ಟ್‌ಗಳನ್ನು ಈ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಕೊಡತಕ್ಕಂಥ ನಿರ್ಣಯವನ್ನು ಮಾಡಿದ್ದೇನೆ. ಅದು ಬಹಳ ದೊಡ್ಡದು ಇರುವುದರಿಂದ ಅದರ ಪ್ರತಿಗಳನ್ನು ತೆಗೆಯಲು ಸ್ವಲ್ಪ ಸಮಯ ಬೇಕಾಗಿರುವುದರಿಂದ, ಪ್ರತಿಗಳನ್ನು ನಾಳೆಯ ದಿವಸ ಒದಗಿಸುತ್ತೇನೆ. ಇದಕ್ಕೆ ಕಾನೂನಲ್ಲಿ ಅವಕಾಶ ಇಲ್ಲ. ಅನೇಕ ಸಲ ಸರಕಾರ ನಡೆಸುವಾಗ ಎನ್‌ಕ್ವೈರಿಗಳು ಬೇಕಾದಷ್ಟು ಆಗುತ್ತವೆ. ನಮ್ಮಲ್ಲಿ ಸುಮಾರು ಎರಡು ಸಾವಿರ ಸೊಸೈಟಿಗಳು ಇವೆ. ಆದರೆ ಈಗ ಬಂದಿರುವ ವಿಚಾರವು ಸಾರ್ವಜನಿಕ ಮಹತ್ವವುಳ್ಳ ವಿಚಾರ ಎಂದು ನಾನು ಮನಗಂಡಿದ್ದೇನೆ: ಕಾರಣ ಏನೆಂದರೆ, ಇದರಲ್ಲಿ ಸಾವಿರಾರು ಎಕರೆಗಳ ಭೂಮಿಯ ವಿಚಾರ ಇದೆ. ಲಕ್ಷಾಂತರ ಜನ ಈ ಸಹಕಾರಿ ಸಂಘಗಳ ಸದಸ್ಯರುಗಳ ವಿಚಾರ ಇದೆ. ಇದರಲ್ಲಿ ಅನೇಕ ಜನರ ಹಿತಾಸಕ್ತಿ ಇದೆ, ಜೊತೆಗೆ ಸರಕಾರಿ ಆಜ್ಞೆಗಳು ಇವೆ. ಆ ಕಾರಣಗಳಿಗಾಗಿ ಇದನ್ನು ಕೂಲಂಕಷವಾಗಿ ಚರ್ಚೆ ಮಾಡಬೇಕು. ಇದು ಸಾರ್ವಜನಿಕರಿಗೆ ತಿಳಿಯಬೇಕು. ತಪ್ಪಿತಸ್ಥರು ಯಾರಾದರೂ ಇದ್ದಲ್ಲಿ ಅವರಿಗೆ ದಂಡನೆ ಆಗಬೇಕು, ಈ ಬಗ್ಗೆ ಚರ್ಚೆಯಾಗಬೇಕೆಂದು ಮಾನ್ಯ ಸದಸ್ಯರುಗಳು ಅಭಿಪ್ರಾಯ

ಪಟ್ಟರು. ಇದರ ರಿಪೋರ್ಟ್‌ನ್ನು ಸದನಕ್ಕೆ ಕೊಡಿ ಎಂದು ಕೇಳಿಕೊಂಡಿದ್ದಾರೆ. ಮಾನ್ಯ ದೇವೇಗೌಡರು ಮತ್ತು ಮಾನ್ಯ ಸದಸ್ಯರುಗಳು ಕೂಡ ಈ ಬಗ್ಗೆ ಕೇಳಿಕೊಂಡಿದ್ದಾರೆ. ಇದರ ವರದಿಯ ಪ್ರತಿಗಳನ್ನು ತಯಾರು ಮಾಡುವ ವ್ಯವಸ್ಥೆಯಾಗಿದ್ದು, ಅದನ್ನು ನಾಳೆ ಒದಗಿಸಿಕೊಡುತ್ತೇನೆ.

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.—ಅಧ್ಯಕ್ಷರೇ.....

ಅಧ್ಯಕ್ಷರು.—ಎಲ್ಲರೂ ದಯವಿಟ್ಟು ಕುಳಿತುಕೊಳ್ಳಬೇಕು. ಎರಡೂ ಕಡೆಯವರು ಈ ರೀತಿಯಾಗಿ ಕೊಂದಲ ಗುಂಟು ಮಾಡಿದರೆ ನನಗೆ ಸಭೆ ನಡೆಸುವುದು ಕಷ್ಟವಾಗುತ್ತದೆ..... ದಯವಿಟ್ಟು ಕುಳಿತುಕೊಳ್ಳಬೇಕು. I will not allow anybody.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಈಗ ಯಾರು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಎರಡೂ ಕಡೆಯವರಿಗೆ ಸ್ವಲ್ಪವೂ ಶಾಂತಿ ಸಮಾಧಾನ ಇಲ್ಲ. ಉರಿಬೆಂಕಿಗೆ ಹುಲ್ಲು ಹಾಕುತ್ತೀರಿ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೆ ಅದನ್ನು ಕೇಳಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಮುಖ್ಯಮಂತ್ರಿಗಳು ಹಾಗೂ ಈ ಸಭೆಯ ನಾಯಕರು ಈ ವಿಚಾರದ ಬಗ್ಗೆ ತೆಗೆದುಕೊಂಡ ನಿರ್ಣಯದ ಬಗ್ಗೆ ನಾನು ಅವರಿಗೆ ಅಭಾರಿಯಾಗಿದ್ದೇನೆ ನಾವು ಜಿ.ವಿ.ಕೆ.ರಾವ್ ರಿಪೋರ್ಟ್‌ನ್ನು ಸದನದಲ್ಲಿ ಇಡಿ ಎಂದು ಕೇಳಿಕೊಂಡಿದ್ದೇವೆ. ಈಗ ಅದನ್ನು ಒಪ್ಪಿಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ಅನೇಕ ಗೃಹನಿರ್ಮಾಣ ಸಂಘಗಳಿವೆ. ಸಾಮಾನ್ಯ ಗೃಹ ಸೊಸೈಟಿಗಳು ರಿಜಿಸ್ಟರ್ಡ್ ಆಗಿವೆ.

ಅಧ್ಯಕ್ಷರು.—ಬಸವಲಿಂಗಪ್ಪನವರೇ, ನಿಮ್ಮ ನಾಯಕರು ಚೆನ್ನಾಗಿ ಹೇಳಿದರು ಎಂದು ಎಲ್ಲರೂ ಮೆಚ್ಚಿಗೆ ವ್ಯಕ್ತಪಡಿಸಿದರು:

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾವು ಆಧಾರದ ಮೇಲೆ ಮಾತನಾಡುವವರು. ಆಧಾರ ಇಲ್ಲದೆ ಮಾತನಾಡುವುದಿಲ್ಲ. ಯಾವ ಒಳ್ಳೆಯ ಕಾರ್ಯಕ್ಕೆ ಥ್ಯಾಂಕ್ಸ್ ಹೇಳಬೇಕೋ ಅವಕ್ಕೆ ಹೇಳಲಾಗುತ್ತದೆ. ಒಳ್ಳೆಯ ಕೆಲಸವನ್ನು ಮೆಚ್ಚಬೇಕಾಗುತ್ತದೆ,

ಶ್ರೀ ಎಸ್. ಎಸ್. ಕಡಪಟ್ಟಿ.—ತಾವುಗಳು ಒಳ್ಳೆಯ ಗುಣ ಉಳ್ಳವರು.....

(ಗೊಂದಲ)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನನ್ನ ಮಾತುಗಳನ್ನು ಮುಗಿಸಲಿಕ್ಕೆ ಬಿಡಿ. ಸಾಮಾನ್ಯವಾಗಿ ಮಾನ್ಯ ಮಲ್ಲಪ್ಪನರು ಬಾಯಿಮುಚ್ಚಿಕೊಂಡು ಕುಳಿತುಕೊಳ್ಳುವವರು ಕೂಡ ಇವೊತ್ತು ಮಾತನಾಡುತ್ತಿದ್ದಾರೆ. ಅಧ್ಯಕ್ಷರೇ, ಈ ಗೃಹ ಸೊಸೈಟಿಗಳಲ್ಲಿ ಕೆಲವುಗಳು ಜನರಹಿತ ಕಾರ್ಯವನ್ನು ಒಳ್ಳೆಯ ರೀತಿಯಲ್ಲಿ ಮಾಡಿವೆ. ಅವರು ನಿಜವಾಗಿಯೂ ಜನಗಳಿಗೆ ಸಹಾಯ ಮಾಡಿದ್ದಾರೆ, ಮಾಡುತ್ತಾ ಇದ್ದಾರೆ.

Sri S. R. Bommai.—I will distribute the report. Then you start discussion.

ಅಧ್ಯಕ್ಷರು.—ಈ ಬಗ್ಗೆ ನಾಳೆ ಮಾತನಾಡಿ...

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಜಿ.ವಿ.ಕೆ. ರಾವ್‌ರವರ ಎರಡು ರಿಪೋರ್ಟ್‌ಗಳು ಇವೆ. ಮತ್ತು ಸಿ.ಓ.ಡಿ. ರಿಪೋರ್ಟ್ ಕೂಡ ಇದೆ. ಎಲ್ಲವನ್ನೂ...

ಶ್ರೀ ರಾಜಪರ್ಧನ್.—ಅಧ್ಯಕ್ಷರೇ ನನ್ನದು ಕ್ರಿಯಾಲೋಪ ಇದೆ...

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರು ಹೇಳುತ್ತಾ ಇದ್ದಾರೆ. ನಾವು ಕೇಳುತ್ತಾ ಇದ್ದೇವೆ, ಹಾಗೆಂದ ಮೇಲೆ ನಿಮ್ಮ ಎಲ್ಲಾ ಬುದ್ಧಿವಂತಿಕೆಯನ್ನು ಅವರಿಗೆ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಯವರು ಮಾತನಾಡುತ್ತಾರೆ. ದಯವಿಟ್ಟು ಕುಳಿತು ಕೊಳ್ಳಿ.

ಶ್ರೀ ರಾಜವರ್ಧನ್.—ಅಧ್ಯಕ್ಷರೇ...

ಶ್ರೀ ಎಸ್.ಆರ್. ಬೊಮ್ಮಾಯಿ.—ಜಿ.ವಿ.ಕೆ.ರಾವ್‌ರವರು ವಿಚಾರಣೆ ನಡೆಸಿದ ಎರಡು ರಿಪೋರ್ಟ್‌ಗಳು ಇವೆ. ಆ ರಿಪೋರ್ಟ್‌ಗಳ ಬಗ್ಗೆ ಚರ್ಚೆಯಾಗುವ ಬಗ್ಗೆ ತಾವು ಹೇಳಿದ್ದೀರಿ. ನಾನೂ ಕೂಡ ಚರ್ಚೆಯಾಗಲಿ ಎಂದು ಹೇಳಿದ್ದೇನೆ. ಸಾಧ್ಯವಾದರೆ ಇವತ್ತು ರಾತ್ರಿ ಎಲ್ಲ ಸದಸ್ಯರಿಗೂ ವರದಿಯ ಪ್ರತಿಯನ್ನು ಡಿಸ್ಟಿಬ್ಯೂಷನ್ ಮಾಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ಇಂಟೀರಿಯಮ್ ವರದಿ ಮತ್ತು ಅಂತಿಮ ವರದಿಯನ್ನು ಕೊಡುತ್ತೇವೆಂದು ಹೇಳಿದ್ದೀರಿ, ಈ ೧೨೮ ಸೊಸೈಟಿಗಳ ಪೈಕಿ ೮೮ ಸೊಸೈಟಿ ಬಗ್ಗೆ ಮಾತ್ರ ಎನ್‌ಕ್ವೈರಿ ಯಾಗಿದೆ. ಇನ್ನು ಕೆಲವು ಸೊಸೈಟಿಗಳ ಬಗ್ಗೆ ಎನ್‌ಕ್ವೈರಿ ಮಾಡಲು ಸಿಒಡಿಗೆ ರೆಫರ್ ಮಾಡಿದ್ದಾರೆ. ಆಗ ಮಾನ್ಯ ಮುಖ್ಯಮಂತ್ರಿಗಳು ಅದನ್ನು ಅಲ್ಲಿಗೇ ಸ್ಟಾಪ್ ಮಾಡಿಸಿದರು ಎಂದು ನನಗೆ ತಿಳಿದು ಬಂದಿದೆ. ಅದನ್ನು ಇಲಿ ಇಟ್ಟರೆ ಗೊತ್ತಾಗುತ್ತದೆ. ಆ ೫೫ ಸೊಸೈಟಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನು ನಿರ್ಣಯವನ್ನು ತೆಗೆದುಕೊಂಡಿದ್ದಾರೆ ಎಂಬುದೂ ಕೂಡ ಹೊರಗೆ ಬರುತ್ತದೆ. ಸಿ.ಓ.ಡಿ. ವರದಿಯನ್ನು ಇಲ್ಲಿ ಇಟ್ಟರೆ ಚರ್ಚೆಗೆ ಸಂಪೂರ್ಣವಾದ ಅವಕಾಶವಾಗುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ. ಸಿ.ಒ.ಡಿ. ವರದಿಯನ್ನು ತಡೆ ಹಿಡಿದಿರುವ ಬಗ್ಗೆ ನನಗೆ ಗೊತ್ತಿಲ್ಲ. ಈ ಐದು ಸೊಸೈಟಿಗಳ ಬಗ್ಗೆ ಕೂಡ ಈ ವರದಿಯಲ್ಲೇ ಇದೆ. ಇಂಟೀರಿಯಮ್ ವರದಿ ಮತ್ತು ಅಂತಿಮ ವರದಿಯನ್ನು ಸಭೆಯಲ್ಲಿ ಇಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ. —ವೈಯಾಲಿ ಕಾವಲ್ ಸೊಸೈಟಿ ಬಗ್ಗೆ ಸಿ.ಒ.ಡಿ. ವರದಿ ಇದೆ

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ತಾವು ವರದಿಗಳನ್ನು ಕೊಡುತ್ತೀರಿ, ಸಂತೋಷ, ಅದಕ್ಕೆ ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ಇವತ್ತು ರಾತ್ರಿ ಕಳುಹಿಸಿಕೊಡುತ್ತೇನೆಂದು ಹೇಳಿದ್ದೀರಿ, ನಾವು ಬೆಳಿಗ್ಗೆ ಅದನ್ನು ಓದಿಕೊಂಡು ರೆಡಿಯಾಗಿ ಬರುತ್ತೇವೆ. ನಾಳೆ ಈ ವಿಚಾರದ ಬಗ್ಗೆ ಚರ್ಚೆ ಮಾಡಲು ನಿಯಮ ೬೮ರಲ್ಲಿ ಏನು ಅವಕಾಶ ಮಾಡಿಕೊಟ್ಟಿದ್ದೀರಿ ಅದನ್ನು ನಾಳೆ ಮೊಟ್ಟ ಮೊದಲು ವಿಷಯವನ್ನಾಗಿ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಈಗ ಎಂ.ಡಿ. ಸೀಟಿನ ಬಗ್ಗೆ ತೆಗೆದುಕೊಳ್ಳೋಣ.

ಶ್ರೀ ಎಸ್.ಆರ್. ಬೊಮ್ಮಾಯಿ.—ಇದನ್ನು ಬೇಕಾದರೆ ಪ್ರಶ್ನೋತ್ತರವಾದ ಮೇಲೆ ತೆಗೆದು ಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ತಾವು ಅಜೆಂಡಾ ನೋಡಿದರೆ ಗೊತ್ತಾಗುತ್ತದೆ,

ಶ್ರೀ ಎಸ್.ಆರ್. ಬೊಮ್ಮಾಯಿ.—ಅಜೆಂಡಾದಲ್ಲಿ ಹಾಕಿದ್ದಾರೆ. ಆದರೆ ಅದು ನನಗೆ ಸರಿ ಎಂದು ಕಾಣುವುದಿಲ್ಲ. ಬೇರೆ ಬೇರೆ ಬಿಲ್‌ಗಳು ಇವೆ. ಪ್ರಶ್ನೋತ್ತರವಾದ ನಂತರ ಇದನ್ನು ತೆಗೆದು ಕೊಳ್ಳೋಣ.

ಶಾಸನ ರಚನಾ ಕಾರ್ಯಕಲಾಪಗಳು

(೧೯೮೯ನೇ ಇಸವಿಯ ಕರ್ನಾಟಕ ವಿಧಾನ ಮಂಡಲ (ಅನರ್ಹತಾ ಪ್ರತಿಬಂಧ ತಿದ್ದುಪಡಿ) ವಿಧೇಯಕ

ಪ್ರೊ॥ ಎ. ಲಕ್ಷ್ಮೀಸಾಗರ್.—ಶಾಸನ ರಚನೆಯಾದ ಮೇಲೆ ಮಿಕ್ಕಿದ್ದನ್ನು ತೆಗೆದುಕೊಳ್ಳೋಣ. ಇದೊಂದನ್ನು ಪಾಸ್ ಮಾಡಿಕೊಡಿ. ೧೯೮೯ನೇ ಇಸವಿ ಕರ್ನಾಟಕ ವಿಧಾನ ಮಂಡಲ (ಅನರ್ಹತಾ ಪ್ರತಿಬಂಧ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ವಿನಂತಿಸುತ್ತೇನೆ. ಇದರಲ್ಲಿ ವಿಶೇಷವಾದಂಥಾದ್ದು ಏನೂ ಇಲ್ಲ. ಶಾಸಕರಿಗೆ ಇರತಕ್ಕಂತಹ ರಕ್ಷಣೆಯನ್ನು ಮಂಡಲ ಪ್ರಧಾನರಿಗೆ ಜಿಲ್ಲಾಪರಿಷತ್ತಿನ ಅಧ್ಯಕ್ಷರಿಗೆ ನೀಡಬೇಕು ಅವರಿಗೂ ಕೂಡ ಈ ವಿನಾಯಿತಿ ಸಿಗಬೇಕೆಂಬ ಬಗ್ಗೆ ಮತ್ತು